# ಬಲಿದಾನ

## ದೃಶ್ಯ ೧

*[ಪಾಳುಬಿದ್ದ ಒಂದು ಕಾಳಿಕಾದೇವಾಲಯ. ಕಗ್ಗತ್ತಲು ಕವಿದುಕೊಂಡಿದೆ. ಭರತಸುತನು ಮಲಗಿದ್ದಾನೆ. ದೂರದಲ್ಲಿ ಭಾರತಾಂಬೆ ನಿಂತಿದ್ದಾಳೆ. ದೂರದಿಂದ ರಾಷ್ಟ್ರಗೀತಾಗಾನ ಕೇಳಿಬರುತ್ತದೆ. ಒಂದಿನಿತು ಬೆಳಕು ಮೂಡಿ ಕಗ್ಗತ್ತಲು ಮಬ್ಬುಗತ್ತಲಾಗುತ್ತದೆ. ಭರತಸುತನು ಒಯ್ಯೊಯ್ಯನೆ ಎಚ್ಚತ್ತು ಕುಳಿತುಕೊಂಡು, ಕಣ್ಣುಜ್ಜಿಕೊಳ್ಳುತ್ತಾ, ಭಾರತಾಂಬೆಯನ್ನು ಕಂಡು ಬೆಚ್ಚುತ್ತಾನೆ.]*

**ಭರತಸುತ** – ಯಾರು ನೀನೆಲೆ ತಾಯೆ? ಮುಸುಗಿದೀ ಕತ್ತಲಲಿ
ಮಬ್ಬಾಗಿ ಕಾಣುತಿಹೆ!

**ಭಾರತಾಂಬೆ** – *(ದುಃಖ ಧ್ವನಿಯಿಂದ)* ಯಾರಾದರೇನಂತೆ?
ನಿನಗೇಕೆ, ಕಂದಾ?

**ಭರತಸುತ** – ಏಕಾಂಗಿಯಾಗಿರುವೆ!
ಜೊತೆಯಿಲ್ಲವೇ ನಿನಗೆ? ಪರದೇಶಿಯೇನು?

**ಭಾರತಾಂಬೆ** – ಜೊತೆಯಿದ್ದರೆನಗಂದು, ಸೌಭಾಗ್ಯವೆನಗಿದ್ದ
ಕಾಲದಲಿ.
**ಭರತಸುತ** – ತಾಯಿ, ಇಂದು ನಿನೇನಾಗಿರುವೆ?

**ಭಾರತಾಂಬೆ** – ದಿಕ್ಕಿಲ್ಲದಲೆದಾಡುತಿಹ ಭಿಕ್ಷುಕಳ್, ಕಂದ!

**ಭರತಸುತ** – ಏನಾಯ್ತು ನಿನ್ನ ಸಿರಿ?

**ಭಾರತಾಂಬೆ** – ಹೆರರ ಪಾಲಾಯ್ತು.

**ಭರತಸುತ** – ಮಕ್ಕಳಿಲ್ಲವೆ ನಿನಗೆ?

**ಭಾರತಾಂಬೆ** – ಮಕ್ಕಳಿರುವರು.

**ಭರತಸುತ** – ಏನು!
ಮಕ್ಕಳಿದ್ದರೂ ಕೂಡ ಭಿಕ್ಷುಕಿಯೆ ನೀನು?

**ಭಾರತಾಂಬೆ** – ದಾಸರಾಗಿಹರವರ್, ನನ್ನ ಮರೆತಿಹರು.

**ಭರತಸುತ** – ನಿನಗಿರಲು ಮನೆಯಿಲ್ಲವೇ?

**ಭಾರತಾಂಬೆ** – ಮನೆಯಿಹುದು. ಆದರೇನ್?
ನನಗಿರಲು ಮನೆಯಿಲ್ಲ. ಪರಕೀಯರೈತಂದು
ಬಾಳುತಿಹರಲ್ಲಿ.

**ಭರತಸುತ** – ತಿನ್ನುವುದಕೇನಿಹುದು?
ನಿನಗಾರು ಉಣಿಸನೀಯುವರಮ್ಮಾ!

**ಭಾರತಾಂಬೆ** – ಧನಧಾನ್ಯ
ಬೇಕಾದ ಹಾಗಿಹುದು. ಆದರೆನಗಿಲ್ಲ!
ಹೊಟ್ಟೆಗಿಲ್ಲದೆ ಸೊರಗಿ ಸಾಯುತಿಹೆನಯ್ಯೋ
ನನ್ನ ಮನೆಯಲಿ ನಾನೆ ತೊತ್ತಾಗಿ ಬಿದ್ದಿರುವೆ!

**ಭರತಸುತ** – ನೀನಾರು, ತಾಯಿ, ನಿಜವಾಗಿ ಹೇಳೆನೆಗೆ
ಬಾಡಿದರು, ನಿನ್ನ ಮೊಗದಲಿ ಕಾಂತಿ ಮಿಂಚುತಿದೆ,
ಹಳೆಯದಾದರು ನಿನ್ನ ಮಕುಟದಲಿ ಕೆಡೆದಿರುವ
ಮುತ್ತುಗಳ ಕೆತ್ತನೆಯ ಗುರುತಿಹುದು. ದನಿಯಲ್ಲಿ
ಮಾಧುರ್ಯವುಕ್ಕುತಿದೆ. ತಳಿಸುತಿವೆ ಹಸಿದಿರುವ
ಕಣ್. ಒಳಗೇನೊ ಬೆಳಕಿಹುದು. ಹೇಳಮ್ಮ,
ನೀನಾರು?

**ಭಾರತಾಂಬೆ** – ನನ್ನ ಗುರುತಾಗಲಿಲ್ಲವೆ, ಮಗುವೆ?

**ಭರತಸುತ** – *(ದುರುದುರು ನೋಡಿ ನಿರಾಶೆಯಿಂದ)*
ಕತ್ತಲಲಿ ನಾ ಕಾಣೆ. ನೀನೆ ಹೇಳಮ್ಮಾ.

**ಭಾರತಾಂಬೆ** – ಗುರುತು ಹೇಳುವ ಮುನ್ನ ಭಿಕ್ಷೆ ಬೇಡುವೆ ನಾನು.
ನೀಡುವೆಯಾ? ಹೇಳು!

**ಭರತಸುತ** – ಕೈಲಾದುದೆಲ್ಲವನು
ನೀಡುವೆನು; ಹೇಳಮ್ಮಾ……. ಧನವು ಬೇಕೇನು?

**ಭಾರತಾಂಬೆ** – ನಿನ್ನ ಧನವೆನಗೇಕೆ? ನಾ ಧನಿಕಳಾಗಿದ್ದವಳ್.
ಧನವೆನ್ನ ಕಾಪಾಡಲಿಲ್ಲ. ಧನಕಾರಣಮೆ
ಕೆಟ್ಟೆನಯ್.

**ಭರತಸುತ** – ಮತ್ತೇನು ಬೇಕಮ್ಮ? ಅನ್ನ?

**ಭಾರತಾಂಬೆ** – ಇನಿತು ದಿನ ಹಸಿದಿರುವೆ. ನನಗದರ ಭಯವಿಲ್ಲ.
ಅನ್ನದಿಂದಲೆ ನನ್ನ ಬಾಳು ಬುದುಕಿಲ್ಲ.

**ಭರತಸುತ** – ಮತ್ತೇನು? *(ನಿಡು ಚಿಂತಿಸಿ)*
ಉಡಲು ದುಗುಲವು ಬೇಕೆ? ತೊಡಲೊಡವೆಗಳ್?

**ಭಾರತಾಂಬೆ** – ಹರಕು ಬಟ್ಟೆಯೆ ಸಾಕು! ಮುರುಕು ಮುಗುಡವೆ ಸಾಕು!
ನನಗೇಕೆ ಆತರಳೆಯರ ವೈಯಾರ?
ಉಂಡುಟ್ಟು ಕಂಡೆಸೆದುದಲ್ತೆ? ನಾ
ಹಳೆಯ ಕಾಲದ ಮುದುಕಿ!

**ಭರತಸುತ** – ಮುದುಕಿಯಾದರು ತರಳೆಯಂತೆಯೆ ತೋರುತಿಹೆ.

**ಭಾರತಾಂಬೆ** – ಅಹುದು, ಮಗು, ಆದರದು ಧನಧಾಯ್ಯದಿಂದಲ್ಲ.
ಅನ್ನದಿಂದಲೂ ಅಲ್ಲ, ಉಡುಗೆಯಿಂದೂ ಅಲ್ಲ.

**ಭರತಸುತ** – ಮತ್ತೇತರಿಂದ?

**ಭಾರತಾಂಬೆ** – ಒಳಗಿರುವ ಬೆಳಕಿಂದ!
*(ಧ್ವನಿ ಬದಲಾಯಿಸಿ ದಿಟ್ಟ ದರ್ಪದಿಂದ)*

ನಾ ಬೇಡುತಿರುವುದನ್ ನೀಡಲ್ ಸಮರ್ಥನೇ
ನೀನ್?

**ಭರತಸುತ** – *(ನಮ್ರನಾಗಿ)*
ಇನ್ನೇನು ಕೊಡಲಮ್ಮ? ಹೇಳು, ನೋಡುವೆನು.

**ಭಾರತಾಂಬೆ** – ದಾನಿಯಾಡುವ ನುಡಿಗಳಲ್ಲವಿವು, ಮಗೂ.
ಏನು ಬೇಡುವೆನೆಂದು ಬೆದರಿಕೆಯೆ ನಿನಗೆ?

**ಭರತಸುತ** – *(ತಡೆ ತಡೆದು)* ಹೌದಮ್ಮ, ಸಂದೇಹ!

**ಭಾರತಾಂಬೆ** – ತಪ್ಪಾಯ್ತು! ತೆರಳುವೆನ್!
*(ಹೊರಡಲೆಳಸುತ್ತಾಳೆ.)*

**ಭರತಸುತ** – *(ತಟ್ಟಕ್ಕನೆ ಎದ್ದುನಿಂತು)*
ನಿಲ್ಲಮ್ಮ. *(ಕೈ ಚಾಚಿ ಮುಂಬರಿವುತ್ತ)*
ನೀನಾರು ಎಂಬುದನು ಹೇಳದೆಯೆ ಹೋಗುವೆಯಾ?

**ಭಾರತಾಂಬೆ** – ದಾನಿಗಳನರಸುತ್ತ ಹೋಗುವೆನು. ನಿನಗಿಲ್ಲ
ದಾನಮಾಡುವ ಹೃದಯ.

**ಭರತಸುತ** – ನೀನಾರ್ ತಿಳಿಸದನ್.
ನಿನಗೆಲ್ಲ ನೀಡುವೆನ್.

**ಭಾರತಾಂಬೆ** – ತಿಳಿಸಲ್, ಬೆದರ್ವೆ ನೀನ್.
ಬಿಕ್ಷೆ ನೀಡುವೆಯೇನ್? ನಾನಾರ್ ಎಂಬುದನ್
ಪೇಳ್ವೆನ್ ಅನಂತರಂ. ನೋಡಲ್ಲಿ, ಅಲ್ಲಿ!
*(ಕಾಳಿಕಾವಿಗ್ರವನ್ನೂ ತೋರಿಸುತ್ತಾಳೆ. ಇಬ್ಬರೂ ನೋಡುವರು.)*
ಆರ ಮನೆಯಿದು? ನೀ ಬಲ್ಲೆಯೇನ್?

**ಭರತಸುತ** – ಬಲ್ಲೆನಮ್ಮಾ. ಮಾಕಾಳಿಯಾಲಯಂ.

**ಭಾರತಾಂಬೆ** – ಮುರಿದಿಂತು ಹಾಳಾದುದೇಕೆ?

**ಭರತಸುತ** – ನಾನರಿಯೆನ್!

**ಭಾರತಾಂಬೆ** – ನಾ ಬಲ್ಲೆ. ಹೇಳುವೆನು ಕೇಳು:
ಭಕ್ತರೆದೆಯಲ್ಲವಳ ನರ್ತನವಿಲ್ಲದಾಯ್ತು!
ಅವಳ ದರ್ಶನಕಳುಕಿದರ್.
ನೆತ್ತರಿನ ನಾಲಗೆಯ ನೋಡಿ ಬೆದರಿದರ್;
ರುಂಡಗಳ ಮಾಲೆಯನು ಕಂಡು ನಡುಗಿದರು!
ಕರಿಯ ಬಣ್ಣವ ಕಂಡು ಹೇಸಿದರು.
ಕೈಯ ಕತ್ತಿಯ ಕಿತ್ತು, ಕೊಳಲನಿಟ್ಟರು ಅಲ್ಲಿ.
ರುಂಡಮಾಲೆಯನಿಳ್ದು ರಚಿಸಿದರು ವನಮಾಲಿಯಂ.
ಶಿವನೆದೆಯ ಮೇಲವಳು ಕುಣಿವುದನು ಬಿಡಿಸಿ
ಕೊಳಲೂದಿ ಕುಣಿವಂತೆ ಮಾಡಿದರು
ಗೋಪಿಯರೊಡನೆ.
ಅದರಿಂದ ವೀರತ್ವವಳಿದುದಯ್.
ರೌದ್ರಮಂ ಪೂಜಿಪುದ ಮರೆತಿಹರ್;
ಅದರಿಂದ ಪಾಳ್ ಬಿದ್ದುದೀ ದೇಗುಲಂ.
*(ಧ್ವನಿ ಸೌಮ್ಯವಾಗಿ)*
ವತ್ಸ, ಮಾಕಾಳಿ ಪೂಜಕನೆ ನೀನ್?

**ಭರತಸುತ** – ಅಹುದಮ್ಮ.

**ಭಾರತಾಂಬೆ** – *(ಅಚ್ಚರಿಯಿಂದ ಎಂಬಂತೆ)*
ಆದರೂ ಬೇಡಿದುದ ನೀಡಲಂಜಿದೇನ್?

**ಭರತಸುತ** – *(ನಾಚಿ ತಲೆಬಾಗಿ)* ಕೇಳಮ್ಮ, ನೀಡುವೆನು.

**ಭಾರತಾಂಬೆ** – ನೆತ್ತರನ್ ಕಂಡಳ್ಕುವೆಯ, ಹೇಳು?

**ಭರತಸುತ** – ನೆತ್ತರೊಳ್ ಮುಳುಗಿದರು ಬೆದರೆನ್.

**ಭಾರತಾಂಬೆ** – ಕತ್ತಿಯನ್ ಕಂಡಳ್ಕುವೆಯ ಹೇಳ್?

**ಭರತಸುತ** – ಕೂರಸಿಯನಲರೆಂದು ಮುಡಿಯುವೆನ್.

**ಭಾರತಾಂಬೆ** – ಕಂಪಿಸದೆ ಧರಿಸಬಲ್ಲೆಯ ಸೆರೆಯ ಸಂಕೋಲೆಯನ್?
ಸಿಡಿಗುಂಡಿನೆದುರಿನಲಿ ಎದೆಯೊಡ್ಡಿ ನಿಲ್ವೆಯೇನ್?

**ಭರತಸುತ** – ನಿಲ್ಲುವೆನ್, ತಾಯಾಣೆ!

**ಭಾರತಾಂಬೆ** – ಯಜ್ಞಗೈವೆಯ ನನಗೆ ನಿನ್ನ ದೇಹಮನ್?

**ಭರತಸುತ** – ಸಂತೋಷದಿಂದ.

**ಭಾರತಾಂಬೆ** – ಪಾಪಕಂಜುವೆಯೇನ್!

**ಭರತಸುತ** – *(ತಡೆತಡೆದು)*
ಅಂಜುವೆನ್, ತಾಯಿ

**ಭಾರತಾಂಬೆ** – ನನಗೋಸುಗಂ?
**ಭರತಸುತ** – *(ಚಿಂತಿಸುತ್ತಾ ಸುಮ್ಮನಿರುತ್ತಾನೆ.)*

**ಭಾರತಾಂಬೆ** – ಚಿಂತಿಸುವೆ ಏಕೆ? ಅಂಜದಿರು! ಕಾಯುವೆನು
ನಾನು! ನನಗಾಗಿ ಏನು ಬೇಕಾದರೂ
ಮಾಡು: ಹೊಣೆಗಾರಳಾನ್!

**ಭರತಸುತ** – ಮಾಡುವೆನು; ನಿನಗಾಗಿ. ಸ್ವಾರ್ಥಮಂ ಕರ್ಮಮಂ
ಫಲಬುದ್ಧಿಯಂ ತ್ಯಜಿಸಿ, ಮಾಡುವೆನು ನಿನಗಾಗಿ.

**ಭಾರತಾಂಬೆ** – ನೀನಿನ್ನು ನನ್ನವನ್.

**ಭರತಸುತ** – ಎಂದೆಂದು ನಿನ್ನವನೆ! ನೀನಾರು, ಮಾತಾಯಿ?

**ಭಾರತಾಂಬೆ** – ವೇದಗಳ ಹೆತ್ತವಳ್! ಯೋಗಿಗಳ ಪಡೆದವಳ್!
ಲೋಕಕ್ಕೆ ವೀರರನು ಕೊಟ್ಟವಳ್!
ಮಾನವಗೆ ಬುದ್ಧಿನೀಡಿದ ತಾಯಿ,

ನಾನ್ ಭಾರತಾಂಬೆ! *(ಸುಯ್ದು)*
ಗುರುತಾಯಿತೇ ಈಗ?

**ಭರತಸುತ** – *(ಬದ್ಧಾಂಜಲಿಯಾಗಿ)* ಜನನಿ, ನಿನಗೇತಕೀ ದುರವಸ್ಥೆ?

**ಭಾರತಾಂಬೆ** – ಸೆರೆಯಾಳು ನಾನು. ನೋಡು,
ಕೈಕಾಲ್ಗಳಂ ಬಿಗಿದ ಸಂಕೋಲೆಗಳ್!
*(ತೋರುತ್ತಾಳೆ.)*

**ಭರತಸುತ** – *(ರೋಷದಿಂದ)* ಕಳಚುವೆನ್, ತಾಯಿ!

**ಭಾರತಾಂಬೆ** – ಬಲವಿರಲ್ ಕಳಚಬಲ್ಲೆಯ ಕಾಣ್.

**ಭರತಸುತ** – *(ಪ್ರಯತ್ತಿಸಿ, ಸೋತು ಏದುತ್ತಾ)*
ಕಬ್ಬಿಣದ ಸಂಕೋಲೆಗಳ್, ತಾಯಿ,
ತುಂಡುಮಾಡಲು ನನಗೆ ಬಲವಿಲ್ಲ.
*(ನೋಡಿ ಅಚ್ಚರಿಯಿಂದ)*
ಬೀಗವಿದೆ! ಬೀಗ ಹಾಕಿದ ದುರುಳನಾರಮ್ಮಾ?

**ಭಾರತಾಂಬೆ** – ನಾನರಿಯೆ, ಯಾರು ಹಾಕಿದರೆಂದು.
ಪರಕೀಯರೆಂದೊಮ್ಮೆ ಯೋಚಿಸುವೆ,
ನನ್ನವರೆ ಎಂದೊಮ್ಮೆ ಗೋಳಿಡುವೆ. *(ನಿಟ್ಟುಸಿರಿಯಿಂದ)*
ಆರೆಂದರಿಯೆನ್!….
ನಾನು ಮಲಗಿದ್ದಂದು ಬೀಗ ಹಾಕಿದರಪ್ಪಾ!
ಕೀಲಿ ಕೈ ಇಲ್ಲ.

**ಭರತಸುತ** – ಕೀಲಿಕೈ ಆರ ಬಳಿ ಇರುವುದಮ್ಮಾ!

**ಭಾರತಾಂಬೆ** – ಹೇಳಲಂಜುವೆ, ಮಗೂ.

**ಭರತಸುತ** – *(ಕೆಚ್ಚಿನಿಂದ)*
ಹೇಳು. ಜೀವವ ತೆತ್ತು ಬಂಧನವ ಬಿಡಿಸುವೆನ್.

**ಭಾರತಾಂಬೆ** – ಗುಟ್ಟಾಗಿ ಹೇಳುವೆನು, ಕೇಳು. *(ಕಿವಿಯಲ್ಲಿ ಹೇಳುತ್ತಾಳೆ.)*

**ಭರತಸುತ** – *(ಕೋಪಾತಿಶಯದಿಂದ)*
ಹೇ ದುಷ್ಟ, ನಿನ್ನನಿದುವರೆಗೂ ಗೆಳೆಯನೆಂದೇ
ತಿಳಿದು ಮರುಳಾದೆ!…… ತಪ್ಪಾಯಿತಮ್ಮಾ;
ಅಪರಾಧಿ ನಾನ್! ಕೀಲಿ ಕೈಯನು ತಂದು ಬಿಡಿಸುವೆನ್.

**ಭಾರತಾಂಬೆ** – *(ವಾತ್ಸಲ್ಯದಿಂದ)*
ತರಲು ಹೋದವರಲ್ಲಿ ಒಬ್ಬನಾದರು ಮರಳಿ
ಬರಲಿಲ್ಲ. ನಿನ್ನ ಗತಿ?

**ಭರತಸುತ** – ಮೃತ್ಯು, ಅಥವಾ ಸಿದ್ಧಿ!

**ಭಾರತಾಂಬೆ** – ದುಡುಕದಿರು, ವತ್ಸ, ದುಡುಕದಿರ್. ಎಚ್ಚರಿಕೆ!

**ಭರತಸುತ** – ನಿನ್ನ ಕೃಪೆಯೊಂದಿರಲಿ, ಗೆಲ್ಲುವೆನ್!
ಮಡಿದರೂ ನಿನಗಾಗಿ ಕದನದಲಿ ಮಡಯುವೆನ್!
ಹರಸಿ ಕಳುಹಮ್ಮಾ.

**ಭಾರತಾಂಬೆ** – *(ಆಶೀರ್ವಾದ ಮುದ್ರೆಯಿಂದ)*
ವಿಜಯೀ ಭವ! ಹೋಗಿ ಬಾ, ಕಂದ ಬೇಗ ಬಾ!

*[ಭರತಸುತನು ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ. ತಾಯಿ ಕೈಯೆತ್ತಿ ಹರಸುತ್ತಾಳೆ. ಮತ್ತೆ ರಾಷ್ಟ್ರಗೀತಗಾನ ಮೆಲ್ಲನೆ ಮೊದಲಾಗಿ ಬರುಬರುತ್ತಾ ಸಮುದ್ರಘೋಷೋಪಮವಾಗಿ ಉಕ್ಕುತ್ತದೆ.]*

## ದೃಶ್ಯ ೨

*[ಪಾಳು ಬಿದ್ದಿರುವ ಕಾಳಿಕಾ ದೇವಾಲಯ. ಕಗ್ಗತ್ತಲು ಬದಲಾಗಿ ಮಬ್ಬು ಕತ್ತಲೆ ಕವಿದಿದೆ. ಕಾಳಿಕಾ ವಿಗ್ರಹಕ್ಕೆ ತುಸು ದೂರದಲ್ಲಿ ಭಾರತಾಂಬೆ ಯಾತನಾ ಕ್ಲಿಷ್ಟವೂ ವಿಷಣ್ಣದೀನವೂ ಆಗಿರುವ ಮುಖ ಮುದ್ರೆಯಿಂದ ನಿಲ್ಲಲಾರದೆ ಎಂಬಂತೆ ನಸುಬಾಗಿ ನಿಂತಿದ್ದಾಳೆ. ಕೈಕಾಲುಗಳಲ್ಲಿ ಕಬ್ಬಿಣದ ಸಂಕೋಲೆಗಲಿವೆ. ಒಂದು ಸರಪಳಿ ಭುಜದ ಮೇಲಿಂದ ಕಾಳೋರಗದಂತೆ ನೇತುಬಿದ್ದು ವಕ್ಷಮಧ್ಯೆ ಹರಿದಿಳಿದಿದೆ. ಆಕೆಯ ಬಟ್ಟೆ ಮಾಸಲು, ಚಿಂದಿ ಚಿಂದಿ. ಕಿರೀಟ ಮುತ್ತು ರತ್ನಗಳೆಲ್ಲ ಉದುರಿ ಶಿಥಿಲವಾಗಿದೆ. ಕೂದಲು ಬಾಚದೆ ಹಿಕ್ಕದೆ ಗಂಟು ಗಂಟಾಗಿ ಕೆದರಿದೆ. ಕಣ್ಣುಗಳಿಂದ ತೊರ ಹನಿಗಳ*

*ಉದುರಿದ ಗುರುತು ಕಾಣಿಸುತ್ತಿದೆ. ನಡು ನಡುವೆ ಸುಯ್ಯುತ್ತಾಳೆ. ಕಷ್ಟದಿಂದ ಕತ್ತೆತ್ತಿ ಭರತಸುತನು ಹೋದತ್ತಕಡೆ ನಿರೀಕ್ಷಣಾದೃಷ್ಟಿಯಾಗುತ್ತಾಳೆ. ಬಿಮ್ಮೆನ್ನುವ ಆ ಪಾಳು ಮೌನದಲ್ಲಿ ಶೃಂಖಲೆಗಳ ಖಣಿ ಖಣಿಲು ವಿಕಟವಾಗಿ ಕೇಳಿಸುತ್ತದೆ.]*

**ಭಾರತಾಂಬೆ** – ಓ ಎಂದಿಗೈತಹೆ, ಮಗೂ, ಮಗೂ, ಮಗೂ?
ಎಂದಿಗೀ ಶೃಂಖಲಾ ಸಂಟದಿನೆನ್ನಂ
ವಿಮುಕ್ತೆಯಂ ಮಾಳ್ಪೆ? ಎಂದಿಗೀ ಕವಿದಿರ್ಪ
ತಮೋಭಾರಮಂ ತವಿಪಯ್, ಜ್ಯೋತಿಯಿಂದೀ ದೇಗುಲಂ
ಬೆಳಗುವೋಲ್? ಎಂದಿಗೀ ದೈನ್ಯ ದಾರಿದ್ರ್ಯಮಂ
ಭೇದಿಸಿ, ಹೃದಂಬುಜದಿ ಗೌರವಶ್ರೀಯಂ
ಪ್ರಚೋದಿಸುವೆ? ಓ ಎಂದಿಗೈತಹೆ, ಮಗೂ? ಮಗೂ!
*(ಗೂಬೆಯೊಂದು ಗೂ ಗು ಎಂದೂಳ್ದು ಹಾರಿ ಹೋಗುತ್ತದೆ. ಭಾರತಾಂಬೆ ಆ ಕಡೆ ನೋಡಿ)*
ಬಹನೊ ಬಾರನೊ? ಶಕುನಮಾವುದಂ ಸೂಚಿಸಿತೊ
ಆ ಇರುಳ್‌ಗಣ್‌ವಕ್ಕಿ! *(ಕಾಳಿಕಾ ವಿಗ್ರಹದ ಕಡೆ ತಿರುಗಿ)*
ಮಹೇಶ್ವರಿ, ಮಹಾಕಾಳಿ,
ಮಾಲಕ್ಷ್ಮಿ ಮೇಣ್ ಮಹಾಸರಸ್ವತಿ ಸರ್ವಮುಂ
ನೀನಾಗಿಯುಂ, ತಾಯಿ, ಲೀಲಾಮಯೀ, ಜಗನ್ಮಾತೆ,
ಇಂದಾವ ಕ್ರೀಡಾವಿನೋದಕೀ ವೇಷಮಂ
ತಳೆದಿರ್ಪೆ? ಸರ್ವಶಕ್ತಳ್ ನೀನ್ ಅಶಕ್ತೆಯೋಲ್
ಕೆಮ್ಮನಿಹೆ! ಸರ್ವಭುವನಶ್ರೀ ನೀನ್ ದರಿದ್ರೆಯೋಲ್
ಬಿನ್ನಗಿಹೆ! ನನ್ನ ಕಂದಂಗಿನಿತು ಕೃಪೆದೋರ್;
ಅನುಗ್ರಹಿಸು ನನ್ನನುಂ.
*(ಗೂಬೆ ಹಾರಿಹೋದ ಕಂಡಿಯಿಂದ ಒಂದು ಕಿರಣ ಪ್ರವೇಶಿಸಿ ನೇರವಾಗಿ ಭಾರತಾಂಬೆಯ ಮೇಲೆ ಬೀಳುತ್ತದೆ.)*
ಅರಿತೇನೀಗಳ್, ಬರ್ಪ
ಈ ಬೆಳಕಿಗಳ್ಕಿ ಪಾರ್ದೋಡಿದತ್ತಾ ನಿಶಾಪ್ರೇಮಿ!
ಆವುದೀ ಕಿರಣಮಾಶಾಹಸ್ತಮೆಂಬಂತೆ
ಬಂದುದೀ ತಾಯಿಯಾಶೀರ್ವಾದ ದೂತನೋಲ್?
*(ದೂರದಿಂದ ಜನಘೋಷವನ್ನು ಮೀರಿ 'ವಂದೇ ಮಾತಂ' ಗೀತೆ ಬರಬರುತ್ತ ಸ್ಪಷ್ಟತರವಾಗಿ ಕೇಳಬರುತ್ತದೆ. ಭಾರತಾಂಬೆ ಹರ್ಷ ಚಕಿತೆಯಾಗಿ ಆಲಿಸುತ್ತ ನಿಲ್ಲುತ್ತಾಳೆ.)*

**ವಾಣಿ** – ವಂದೇ ಮಾತರಂ!
ಸುಜಲಾಂ ಸುಫಲಾಂ ಮಲಯಜಶೀತಲಾಂ
ಸಸ್ಯಶ್ಯಾಮಲಾಂ ಮಾತರಂ,
ವಂದೇ ಮಾತರಂ!

**ಭಾರತಾಂಬೆ** – ಆವುದೀ ದಿವ್ಯ ಗೇಯಂ, ಮಾಧುರ್ಯಸ್ವರ್ಧುನಿಯವೋಲ್
ತೆರೆತೆರೆಯೆ ತಾನುಕ್ಕಿ ಪೊನಲ್ವರಿದು ಬಂದುಪುದು?
ಮಂತ್ರಶಕ್ತಿಯೆ ಮೂಡಿ ಗಾನರೂಪವನಾಂತು
ಬಂದಂತೆ ಬರ್ಪುದೆನ್ನೀ ಹೃದಯ ಗಹ್ವರದಿ
ಶಕ್ತಿ ತಾಂ ಸಂಚರಿಸೆ! –
ಕೀಲಿಕೈಯಂ ತರಲ್ ಪೋದ ಕಂದನ ಕೊರಳೊ?
ಮೇಣ್ ಬಾನ್‌ಬಟ್ಟೆಯನ್ ಅಲೆವ ಆವನಾದರದೊರ್ವ
ಸಗ್ಗಿಗನ ಕಂಠದಿಂ ಬುಗ್ಗೆಯುಕ್ಕುವ ಉಲಿಯೊ?
ಅಃ ಏನಿಂಚರಂ? – ತೇಲಿ ಬಂದುಪುದು
ನಿರಾಶಾ ತಮಂಧಮಂ ತವಿಪ ರವಿಯುದಯದೋಲ್!

**ವಾಣೀ** – ಶುಭ್ರಜ್ಯೋತ್ಸ್ನಾ ಪುಲಕಿತಯಾಮಿನೀಮ್
ಫುಲ್ಲಕುಸುಮಿತ ದ್ರುಮದಲ ಶೋಭಿನೀಮ್
ಸುಹಾಸಿನೀಮ್ ಸುಮಧುರ ಭಾಷಿಣೀಮ್
ಸುಖದಾಂ ವರದಾಂ ಮಾತರಂ!
ವಂದೇ ಮಾತರಂ!

**ಭಾರತಾಂಬೆ** – ಬೆಳ್ದಿಂಗಳ್! ಬೆಳ್ದಿಂಗಳಂ ಮಿಂದಿರುಳ್!
ಅರಳಿದರಲಂ ಮೆರೆವ ಬಾನೆತ್ತರದ
ಕಾಡುಮಲೆ ಕೊಡುಗಳ್
ಏನ್ ಪಯಿರ್ನಗೆಯೊ! ಏನ್ ಪಕ್ಕಿಯಿಂಚರಮೊ!
ಕೋಗಿಲೆಯ ನಿಡುಸರಮೊ? ಗಿಳಿಗಳುಲಿಯೊ? –
ಅಃ ಈ ಕತ್ತಲೆಯ ಸೆರೆಯ ಒಬ್ಬೊಂಡಿಗಳ್ ನನಗೆ
ಮಾತುಗಳೆ ತೂಂತಿಟ್ಟವೋಲ್ ಮೆರೆಯುತಿವೆ ಬಗಗಣ್ಗೆ
ಚೆಲ್ವು ಚಿತ್ರಂಗಳ್ ಮೇಣ್ ಇಂಚರಂಗಳ್
ನಾನಾಗುವಾಸೆಗೊಡ್ಡಿರ್ಪ ಕನ್ನಡಿಯ ತೆರದಿ

ನನ್ನಿರ್ಪ ದುಸ್ಥಿತಿಯ ಮೂದಲಿಸುತಿಹುದಲ್ತೆ! –
ನಮೆಯುತಿರೆ ನಾನಿಂತು – ಅಯ್ಯೊ –
ಎಂದಿಗಾಗುವೆನಂತು?

**ವಾಣೀ** – ಕೋಟಿ ಕೋಟಿ ಕಂಠ ಕಲಕಲನಿನಾದ ಕರಾಲೇ
ಅನೇಕ ಕೋಟಿ ಭುಜೈರ್ಧೃತ ಖರ ಕರವಾಲೇ!

**ಭಾರತಾಂಬೆ** – ದಿಟಂ ನಾನಬಲೆಯಲ್ತು.
ನಾನಬಲೆಯೆಂಬರಾರ್?

**ವಾಣೀ** – ಬಹುಬಲ ಧಾರಿಣೀಂ ನಮಾಮಿ ತಾರಿಣೀಂ
ರಿಪುಬಲ ವಾರಿಣೀಂ ಮಾತರಂ
ವಂದೇ ಮಾತರಂ!

**ಭಾರತಾಂಬೆ** – ಧೈರ್ಯಮಂ ತುಂಬುತಿದೆ ಧೀರ ಗೀತಂ:
ಋಷಿಯಲ್ಲದನ್ಯರ್ಗೆ ಸಾಧ್ಯಮಲ್ತೀ ಸಾಹಸಂ!

**ವಾಣೀ** – ತುಮಿ ವಿದ್ಯಾ ತುಮಿ ಧರ್ಮ,
ತುಮಿ ಹೃದಿ ತುಮಿ ಮರ್ಮ,
ತ್ವಂ ಹಿ ಪ್ರಾಣಾಃ ಶರೀರೆ!
ಬಾಹು ತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಯ್ ಪ್ರತಿಮಾ ಗಡಿ ಮಂದಿರೇ ಮಂದಿರೇ!

**ಭಾರತಾಂಬೆ** – *(ಕಾಳಿಕಾಮೂರ್ತಿಯ ಕಡೆ ಕೈಮುಗಿದು)*
ನೀನೆ ವಿದ್ಯೆ, ನೀನೆ ಧರ್ಮ,
ನೀನೆ ಸತ್ತ್ವ, ನೀನೆ ಮರ್ಮ,
ತೋಳ್ಗಳಲ್ಲಿ ನೀನೆ ಶಕ್ತಿ
ಹೃದಯದಲ್ಲಿ ನೀನೆ ಭಕ್ತಿ.
ಗುಡಿಗುಡಿಯೊಳೂ ನೀನೆ ಮೂರ್ತಿ
ಸರ್ವ ಹೃದಯ ತಪಃಸ್ಫೂರ್ತಿ,
ಹೇ ಜಗದ್ಧಾತ್ರಿ!

**ವಾಣೀ** – ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ
ಕಮಲಾ ಕಮಲದಲ ವಿಹಾರಿಣೀ
ವಾಣೀ ವಿದ್ಯಾದಾಯಿನೀ ನಮಾಮಿ ತ್ವಾಂ
ನಮಾಮಿ ಕಮಲಾಂ ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ,
ವಂದೇ ಮಾತರಂ!
ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ
ವಂದೇ ಮಾತರಂ!

**ಭಾರತಾಂಬೆ** –
*(ಕಾಳಿಕಾ ವಿಗ್ರಹವನ್ನು ದೃಷ್ಟಿಸಿ ಸುಸ್ಮಿತೆಯಾಗಿ ಧೀರ ಭಾವದಿಂದ ಒಂದೊಂದು ನುಡಿಯನ್ನೂ ಬಿಡಿಬಿಡಿಯಾಗಿ ಹೇಳಿಕೊಂಡು ರಸಾಸ್ವಾದನೆ ಮಾಡುತ್ತಾಳೆ.)*
ದುರ್ಗೇ: ದಶಪ್ರಹರಣ ಧಾರಿಣೀ! ಕೊಲ್ವವಳ್!
ಕಮಲೇ: ಕಮಲದಲ ವಿಹಾರಿಣೀ! ಚೆಲ್ವಿಗೆ ನೆಲೆ ನೀ ಲಕ್ಷ್ಮಿ!
ವಾಣೀ: ಜಾಣ್ಮೆಯ ಕಣಿ – ಸರಸ್ವತಿ! ನಮೋ!
ನೀನಮಲೆ, ನೀನತುಲೆ! ಸುಜಲೆ, ಸುಫಲೆ!
ಶ್ಯಾಮಲೆ! ಸರಲೆ! ಸುಸ್ಮಿತೆ! ಭೂಷಿತೆ!
ಧರಣೀಂ ಭರಣೀಂ ಮಾತರಂ
ವಂದೇ ಮಾತರಂ!
ಎಂತಪ್ಪ ಮಂತ್ರಗಾನಂ! ನನ್ನೊಣಗು ಮೆಯ್ಯೊಳುಂ
ಚೋದಿಸಿತು ದಿವ್ಯ ಚೈತನ್ಯಮಂ : ಆಲಿಸಿರೆ,
ಆಲಿಸುತ್ತಾಲಿಸುತ್ತೇನ್ನನೇ ನಾ ಮರೆತು
ನಾನೆ ಆ ಬಣ್ಣನೆಯ ದೇವಿಯಾಗಿರ್ದೆನಲ್ತೆ!

*(ಕಂಡಿಯಿಂದ ಬರುತ್ತಿದ್ದ ಕಿರಣ ಕಾಂತಿ ಒಯ್ಯನೆ ಮೋಡ ಕವಿದಂತೆ ಮರೆಯಾಗುತ್ತದೆ. ತನ್ನ ದುಃಸ್ಥಿತಿಯನ್ನು ನೋಡಿಕೊಳ್ಳುತ್ತ ಮತ್ತೆ)*
ಅಯ್ಯೊ ಆ ದೇವಿಯರ್? ನಾನಾರ್?
ಅವಳ್ ಸರ್ವಸ್ವತಂತ್ರೆ, ನಾನೊ ಪೂರ್ಣ ಪರತಂತ್ರೆ. –
ಇನ್ನೆಂದೊ ನನಗೆ ಆ ಮುಕ್ತಿ? –

ಪಿಂತಿರುಗಿ ಬಂದಪನೊ ಆ ನನ್ನ ಕಂದನ್,
ತಂದಪನೊ ಕೀಲಿಕಯ್ಯನ್
ಮೇಣ್ ಇತರರಂದದೋಳ್ ಬಲಿವೋದಪನೊ ಪಗೆಗೆ?
ಆವ ಸೆರೆಯೊಳ್ ಕೊರಗುತಿರ್ಪನೊ?
ಆರ ಹಿಂಸೆಗೆ ನರಳುತಿರ್ಪನೊ?
ಮೇಣ್ ಗಾಯಗೊಂಡಿನ್ನೆಲ್ಲಿ ಕೊಳೆಯುತಿರ್ಪನೊ?
ಎನಿತೊ ಬರಿಸಗಳಾಯ್ತು; ಇನ್ನೆಲ್ಲಿ ಬಂದಪನ್?

*(ಮತ್ತೆ ಮೋಡ ಸರದಿಂತಾಗಿ ಕಿರಣಕಾಂತಿ ಹೆಚ್ಚಿ ಮೊದಲಿನಂತೆ ಸ್ಪಷ್ಟವಾಗುತ್ತದೆ. ಮತ್ತೆ ಜನಘೋಷ ಕೇಳಿಬರುತ್ತದೆ. 'ನಡೆ ಮುಂದೆ ' ಎಂದ ರಣಗೀತೆ ಕೇಳಿಬರುತ್ತದೆ.)*

**ವಾಣೀ** – ನಡೆ ಮುಂದೆ! ನಡೆ ಮುಂದೆ!
ನುಗ್ಗಿ ನಡೆ ಮುಂದೆ!
ಜಗ್ಗದೆಯೆ ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ!
*(ಢಂ ಢಂ ಎಂದು ಗುಂಡುಗಳ ಸದ್ದು ಕೇಳಿಸುತ್ತದೆ. ಒಡನೆಯೆ ರಣಗೀತೆ.)*
ಬೆಚ್ಚ ಬಿಡು, ನೆಚ್ಚ ನೆಡು,
ಕೆಚ್ಚೆದೆಯ ಗುಡಿಯಲ್ಲಿ;
ಸೆರೆಯ ಹರಿ, ಅರಿಯನಿರಿ,
ಹುಟ್ಟಳಿಸು ಹುಡಿಯಲ್ಲಿ!
*(ಸತ್ತೆನಯ್ಯೋ* – ನೀರು, ನೀರು, ನೀರು ಎಂಬ ಕೂಗು ಕೇಳಿಸುತ್ತದೆ.)
ಅಳಿವೆ ನಾನ್, ಅಳಿವೆ ನೀನ್,
ನಮ್ಮೆಲುಬುಗಳ ಮೇಲೆ
ಮೂಡುವುದು ನೋಡು ಅದೊ
ನವಭಾರತದ ಲೀಲೆ!……
ಆತ್ಮ ಅಚ್ಯುತವೆಂದು
*(ಮತ್ತೆ ಗುಂಡಿನ ಶಬ್ದ. ಖಡ್ಗಗಳ ಝಣತ್ಕಾರ – ವೀರಘೋಷ.)*
ಮೃತ್ಯು ನಶ್ವರವೆಂದು
ಭಾರತಿಗೆ ಜಯ ಎಂದು
ನಡೆ ಮುಂದೆ! ನಡೆ ಮುಂದೆ!

ನುಗ್ಗಿ ನಡೆ ಮುಂದೆ!……

*(ಇದಕ್ಕಿದ್ದ ಹಾಗೆ ಕಿರಣಕಾಂತಿ ಕೆಂಪಾಗಿ ರಕ್ತವರ್ಣ ಗುಡಿಯ ತುಂಬ ಹಬ್ಬುತ್ತದೆ. ಭಾರತಾಂಬೆಯ ಮುಖಮ್ಲಾನತೆ ಮಣ್ದು ವೀರಶ್ರೀ ಉಗ್ರವಾಗಿ ಶೋಭಿಸತೊಡಗುತ್ತದೆ. ಶೃಂಖಲೆಯ ಲೋಹನಾದ ಸ್ಪಂದಿಸುತ್ತದೆ. ಆಕೆಯ ಕಣ್ಣು ಭಯಂಕರ ದೀಪ್ತಿಯಿಂದ ಬೆಳಗುತ್ತದೆ.)*

**ಭಾರತಾಂಬೆ** – ಮಗೂ, ನನ್ನ ಬಿಡುಗಡೆಯ ಜನ್ನಕ್ಕೆ ನೀಂ
ಪೊತ್ತಿಸಿದ ಬೆಂಕೆಯಿದು ಈ ಕ್ರಾಂತಿ!
ಹರಕೆಯಿದೊ : ಉರಿಗೆ ನೀನೊಳಗಾಗದಿರು!
*(ಜನಘೋಷದ ರೌದ್ರತೆ ಹೆಚ್ಚುತ್ತದೆ. 'ವಂದೇ ಮಾತರಂ ', 'ಮಹಾತ್ಮಾ ಗಾಧಿಕೀ ಜಯ್*
*' ಮೊದಲಾದ ಘೋಷಗಳು ಹಾಹಾಕಾರವನ್ನೂ ಮೀರಿ ಕೇಳಿ ಬರುತ್ತದೆ. ದೊಡ್ಡದೊಂದು ಅಗ್ನಿಜ್ವಾಲೆಯ ದೀಪ್ತಿ ದೇವಸ್ಥಾನವನ್ನೆಲ್ಲಾ ಕಂಪಗೆ ಬೆಳಗಿ ಭೀಕರವಾಗುತ್ತದೆ.)*

**ಭಾರತಾಂಬೆ** – ಏನಿದೀ ಬೆಂಕಿ?
ಗೋಪುರೋಪಮವೆದ್ದು ಗಗನಮಂ ತಿವಿಯುತಿದೆ!
ವಸ್ತ್ರ ದಹನದ ಧೂಮವಾಸನೆಯೊ?
ಮನೆಮನೆಗಳುರಿವ ಕೌರಿನ ಹೊಗೆಯೊ? –
ಮಗೂ, ಸರ್ವ ದೇವರುಗಳೂ ನಿನಗಕ್ಕೆ ರಕ್ಷೆ!
*(ಭಾರತಾಂಬೆ ಕಿವಿಗೊಡುತ್ತಾಳೆ.)*

**ವಾಣೀ** – ವೇದಋಷಿ ಭೂಮಿಯಲಿ ನಾಕನರಕಗಳಿಂದು
ಸಾವು ಬುದಕಿನ ಕಟ್ಟಕಡೆಯ ಹೋರಾಟದಲಿ
ಸಂಧಿಸಿವೆ. ಮಾನವನೆದೆಯ ಕಾಳಕೂಟದಲಿ
ಅಮೃತವನೆ ಹಾರೈಸಿ, ಬಲಿರಕ್ತದಲಿ ಮಿಂದು,
ಕಾದಿಹೆವು ಕಣ್ಣೀರು ತುಂಬಿ, ನಾಗರಿಕತೆಯ
ನಾಗಿನಿಯು ಪ್ರಗತಿನಾಮಕ ಫಣೆಯ ಮೇಲೆತ್ತಿ
ಚುಂಬಿಸಿಯೆ ಕೊಲ್ಲಲೆಳಸುತಿದೆ: – ಹಿಂದಿನ ಬುತ್ತಿ
ಸಮೆಯುತಿದೆ. ಇಂದಿನ ಮಹಾ ತಪಸ್ಸಿನ ಚಿತೆಯ
ರಕ್ತಿಮ ವಿಭೂತಿಯೊಳೆ ಮುಂದಿನ ನವೋದಯದ
ಧವಳಿಮ ಪಿನಾಕಧರನ್ಯೆತಹನು : ಮತ್ತೊಮ್ಮೆ

ಭಾರತಾಂಬೆಯು ಜಗದ ಬೆಳಕಾಗುವಳು : ಹೆಮ್ಮೆ
ಗೌರವಗಳಿಂದ ಜನಗಣದ ಕಟು ನಿರ್ದಯದ
ಲೋಭ ಬುದ್ಧಿಯ ಹೀನ ಕುಟಿಲತೆಯನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರಮರ್ತಿನಿಯಾಗಿ!

**ಭಾರತಾಂಬೆ** – ನನ್ನ ಮಂಗಳ ಗತಿಯನಿಂತುಲಿವ ನಿನಗೆ
ಕೋಟಿ ಮಂಗಳಮಕ್ಕೆ, ಕವಿಕುಮಾರ.
ನಿನ್ನ ಶುಭದಾದೇಶಮದು ಶೀಘ್ರದಿಂ ಸಲ್ಗೆ!
ನಿನ್ನ ಜನನಿಯ ಕೀರ್ತಿ ಲೋಕತ್ರಯದಿ ನಿಲ್ಗೆ!
ಪುಣ್ಯ ಸಂಸ್ಕೃತಿ ಗೆಲ್ಗೆ! ಶಾಂತಿ ಬಾಳ್ಗೆ!
*(ಮತ್ತೆ ರಕ್ತಕಾಂತಿ ಮಾಣ್ದು ಶ್ವೇತವರ್ಣದ ದೀಪ್ತಿ ದೇವಾಲಯವನ್ನು ವ್ಯಾಪಿಸುತ್ತದೆ.)*
ಮತ್ತಿದೇನ್? ಮಾಣ್ದುದಾ ಶೋಣಿತ ಜ್ವಾಲೆ!
ಶಾಂತಿಯಂ ಪಸರಿಸಿಹುದೀ ಧವಳಾಗ್ನಿ ಲೀಲೆ!
*(ನೋಡುತ್ತಾ ಕಿವಿಗೊಡುತ್ತಾಳೆ.)*

**ವಾಣೀ** – ಈ ಮಹಾ ಸ್ವಾತಂತ್ರ್ಯ ರಣಯಾಗಧೂಮದಲಿ
ಶ್ವೇತಾಗ್ನಿ ಜ್ವಾಲೆಯೊಂದುರಿಯುತಿದೆ; ನಿಶ್ಚಲಂ
ರಂಜಿಸುತ್ತಿದೆ – ಶಾಂತಿಯಲಿ ಹಿಮಮಹಾಚಲಂ
ರಾರಾಜಿಪಂತೆ ನೀಲಿಮ ನಭೋಧಾಮದಲಿ.
ಲೋಕಲೋಚನದಂತರಾಳದಾರಾಮದಲಿ
ವಿಶ್ವಕಂಪನಕಾರಿಯಾದ ದರ್ಮದ ಬಲಂ
ಮೂರ್ತಿಗೊಳೆ ಮೂಡಿದೀತನು ಮಹಾತ್ಮನೆ ವಲಂ!
ಬಾಳು ಪಾವನಮಾದುದೀತನಿಂ ಭೂಮಿಯಲಿ!
ಓ ಮಹಾತ್ಮನೆ, ನಿನ್ನ ಸಾನ್ನಿಧ್ಯ ತೀರ್ಥದಲಿ
ಮಾನವನ ಮೋಹ ಮದ ಮಾತ್ಸರ್ಯಗಳು ಮಿಂದು
ಪ್ರೇಮದಿ ಪುನೀತವಾಗಿಹವು! ಸುಮುಹೂರ್ತದಲಿ
ಭಾರತಾಂಬೆಯ ಸಿರಿವಸಿರಿನಿಂದಲೈತಂದು
ಧರ್ಮದಲಿ ನೆಚ್ಚುಗೆಡುತಿದ್ದೆಮಗೆ ನೀನಿತ್ತೆ!
ಪ್ರಚ್ಛನ್ನ ಕಲ್ಕಿ ಓ, ದೃಢಭಕ್ತಿಯನು ಮತ್ತೆ!

**ಭಾರತಾಂಬೆ** – ಧನ್ಯೆ ನಾನಾತನಂ ಪಡೆದು! –
ಇಂದು ಭುವನಕೆ ಮಾನ್ಯೆ ನಾನಾತನಿಂ!
ಬಹುಯುಗ ತಪಸ್ಯೆಯಿಂ ಪಡೆದಿರ್ಪೆನಾತನಂ,
ಲೋಕಕ್ಕೆ ಶಾಂತಿದೂತನಂ!
ಕಂದರೊಳ್ ಕಂದನಂ
ನನ್ನ ಹೃದಯಾನಂದನಂ!

*[ಮತ್ತೆ ಮಬ್ಬು ಮುಸುಗುತ್ತದೆ. ನಿಶ್ಶಬ್ದವಾಗಿ ಕತ್ತಲೆ ಹೆಚ್ಚುತ್ತಾ ಹೋಗಿ ಕಗ್ಗತ್ತಲೆ ಕವಿಯುತ್ತದೆ. ದೂರದಲ್ಲಿ ಸಿಡಿಮದ್ದಿನ ಸದ್ದು ಕೇಳಿಸುತ್ತದೆ. ಜನರ ರಣಘೋಷ ವಿಮಾನಗಳ ಝುಂಕಾರ ಇತ್ಯಾದಿ ತಾಯಿಯ ಅಳು, ಹಸುಳೆಯ ನರಳು ಇತ್ಯಾದಿ. ಭಾರತಾಂಬೆ ಸುಯ್ದು ಸಂತಪಿಸುತ್ತಾಳೆ.]*

**ಭಾರತಾಂಬೆ** – ಇರುಳ್, ಪಗಲ್; ಪಗಲ್, ಇರುಳ್.
ಮತ್ತಿದೇನ್ ಕವಿದುದೀ ಕಲ್‌ಗತ್ತಲೆ!
ಯುದ್ಧ ಭೂತಂ ತೊಳಲುತಿದೆ ಬರಿಬತ್ತಲೆ!

**ವಾಣೀ** – ಸುತ್ತಿದನು ಪೃಥ್ವಿಯಂ ಸಮರ ಶೇಷಂ, ತನ್ನ
ನಾನಾ ರಣದ ಫಣೆಗಳಂ ನಿಮಿರಿ, ಮೃತ್ಯುಮಯ
ಗರಳದಿಂ ದೇಶದೇಶದ ಬಾಳ್ಗೆ ಕಷ್ಟ ಭಯ
ಶೋಕ ರುಜೆ ದಾಸ್ಯಗಳನಡಕಿ. ಕೊಲ್ಲುವ ಮುನ್ನ
ಕಾಳಕೂಟವ ಕುಡಿವ ಕೈಲಾಸಪತಿಯೆಲ್ಲಿ?....

**ಭಾರತಾಂಬೆ** – ಎಂದಿಗಿದು ಮುಗಿಯುವುದೊ ಆ ದೇವನೆಯೆ ಬಲ್ಲ.
ಕತ್ತಲೆಯೆ ನುಂಗುತಿದೆ ಲೋಕ ಲೋಕವನೆಲ್ಲ.
ಸಹಿಪೆನೆಂತೀ ಕ್ರೂರ ದಾಸ್ಯಮಂ?
*(ಕತ್ತಲಲ್ಲಿ ಕಾಣಿಸದೆ ಒಂದು ಧ್ವನಿ ಮಾತ್ರ ಕೇಳಿಸುತ್ತದೆ.)*

**ಧ್ವನಿ** – ಸತ್ತವರ ಕರೆಯು, ಓ ಕೂಗುತಿದೆ, ಅದೊ ಕೇಳು,
ಭೂತಕಾಲದ ಗರ್ಭಗೋರಿಯಿಂದ;
ಆಲಿಸಿಯು ಅದನು ನೀ ಸುಮ್ಮನಿರುವೆಯ ಹೇಳು,
ದೇಶಮಾತೆಯು ಹಡೆದ ವೀರಕಂದಾ?
ಏಳಿರೈ ಸೋದರರಿರ, ನಿಮಗಾಗಿ ಮಡಿದೆಮ್ಮ

ಮರೆಯದಿರಿ, ನಿಮ್ಮಣ್ಣತಮ್ಮದಿರನು….
ಇರಲಿ ಹೂವಿನ ಮಾಲೆ, ಇರಲಿ ರೇಶ್ಮೆಯ ವಸನ,
ಇರಲಿ ಮುತ್ತಿನ ಹಾರ! ಕೈಗತ್ತಿ ಬರಲಿ!
ಇರಲಿ ಹೊಸ ಹೆಣ್ಣು ಮದುವೆಯ ಸೊಗಸು ಶೃಂಗಾರ;
ಬರಲಿ ಕಾರಾಗಾರ! ಮೃತ್ಯುವೈತರಲಿ!
ರಕ್ತಹೃದಯದ ಬಿಸಿಯ ರಕ್ತತರ್ಪಣವಿತ್ತು
ತಣಿಸಿರೈ ಸತ್ತರಾ ಬಯಕೆ ತೆತ್ತು;
ಇಲ್ಲದಿರೆ ನಿಮಗಾಗಿ ಸತ್ತೆಮಗೆ ಸೊಗವಿಲ್ಲ,
ಬದುಕಿರುವ ನಿಮಗುಮಾ ಬದುಕೆ ಮಿತ್ತು!
ಇಂದು ರಕ್ತದ ಬಿಂದು, ಮುಂದೆ ಸೌಖ್ಯದ ಸಿಂಧು!
ಎಂದು ಸಾಹಸಕೇಳಿ, ಹೀಜರಿಯ ಬೇಡಿ!
*(ಒಬ್ಬ ಬಾಲಕನ ಛಾಯೆ ಸುಳಿಯುತ್ತದೆ.)*

**ಭಾರತಾಂಬೆ** – ನೀನಾರು, ಮಗು?
ಆವ ತಾಯಿಯ ಕರುಳ್ಗೆ ಉರಿಯಿಕ್ಕಿ ಬಂದಿರುವೆ?

**ಛಾಯಾಧ್ವನಿ** – ಏಕಮ್ಮ ನಿನಗೀ ನಿರಾಶೆ?

**ಭಾರತಾಂಬೆ** – ಕತ್ತಲೊಳ್ ಕಾಣಿಸದೆ ಆರವರ್ ನುಡಿವವರ –

**ಛಾಯಾಧ್ವನಿ** – ನಾನಮ್ಮ – ಛಾಯಾಧ್ವನಿ!

**ಭಾರತಾಂಬೆ** – ಛಾಯಾಧ್ವನಿ? ಆರ ಛಾಯಾಧ್ವನಿ?

**ಛಾಯಾಧ್ವನಿ** – ಆರೊಬ್ಬನದು ಅಲ್ತು. ತಾಯ ಬಿಡುಗಡೆಗಾಗಿ
ದುಡಿದು ಮಡಿದಾ ಕೋಟಿ ಜೀವಗಳ್ಗಾಂ ಪ್ರತಿಮೆ.
ತಂದಿಹೆನ್ ನಿನಗೊಂದು ವಾರ್ತೆಯನ್.

**ಭಾರತಾಂಬೆ** – ಮಂಗಳಮೊ? ಮೇಣ್….

**ಛಾಯಾಧ್ವನಿ** – ಮಂಗಳದ ಸಂದೇಶಮದು, ಜನನಿ.

**ಭಾರತಾಂಬೆ** – ಕೋಟಿ ಅಮಂಗಳಗಳಿಂ ಒಂದಲ್ತೆ
ಮೂಡಿತೀ ಮಂಗಳಧ್ವನಿ! *(ಸುಯ್ವುಳ್)*

**ಛಾಯಾಧ್ವನಿ** – ಶೋಕಮಂ ಬಿಡು, ತಾಯಿ : ಸ್ವಾತಂತ್ರ್ಯಸಂಗ್ರಾಮದೊಳ್
ಸಂತೋಷದಿಂ ಮಡಿದರೆಮ್.
ನೀನಳಲ್ ಕುಂದಪ್ಪುದೆಮ್ಮಾ ಸಂತಸಕೆ. –
ನಟ್ಟನಡು ರಾತ್ರಿಯೊಳ್ ದಟ್ಟಯ್ಸುತಿರೆ ಇರುಳ್
ನಿನಗೆ ಬಿಡುಗಡೆಯಪ್ಪುದಾ ಭರತಸುತನಿಂ! –
ಬೀಳ್ಕೊಳ್ಳುವೆನ್ – ಪರಸೆಮ್ಮನಮ್ಮಾ.

**ಭಾರತಾಂಬೆ** – ನಿಮಗೆಲ್ಲರ್ಗಂ ಸುಗತಿಯಕ್ಕೆ
ಜನ್ಮಜನ್ಮದೊಳುಂ ನನಗೆ ನೀಮನಿಬರುಂ
ಮಕ್ಕಳಕ್ಕೆ! – *(ತನ್ನೊಳ್ ತಾನೆ)*
ಎನಿತು ಮಕ್ಕಳ್ ನನ್ನ ಸಲುವಾಗಿ
ತಂದೆ ತಾಯಂದಿರನ್ ತೊರೆದಗಲಿದರ್?
ಎನಿತು ಪೆಂಡಿರ್ ತಮ್ಮ ಗಂಡಂದಿರನ್
ಮೀರಿ ಮಡಿದರ್?
ಎನಿತು ಸತಿಯರ್ ತಮ್ಮ ಮಾಂಗಲ್ಯಮಂ
ಸ್ವಾತಂತ್ರ್ಯ ದೇವತೆಗೆ ಬಲಿದಾನವಿತ್ತು
ಕಣ್ಬನಿಯ ಕಡಲೊಳಳ್ದಿಹರ್!
ಎನಿತು ಮನೆಗಳ್ ಮುರಿದುವೆನಿತು ಸಂಸಾರಗಳ್
ಸಿರಿಯಳಿದು ಗತಿಗೆಟ್ಟುವಡವಿಪಾಲಾಗಿ:
ಬಲಿಪರಂಪರೆವೇಳ್ಕುಮೀ ಸ್ವಾತಂತ್ರ್ಯ ಸಾಧನೆಗೆ.
ಪಡೆಯೆ ಬಲಿದಾನಂ;
ಪಡೆದುದಂ ಪಿಡಿಯೆ ಬಲಿದಾನಂ;
ಪಿಡಿದುದಂ ನಡೆಯೆ ಬಲಿದಾನಂ!
ಬಲಿದಾನಕುಂಟೆ ಕೊನೆ?
ಬಲಿಪರಂಪರೆಯಲ್ತೆ ಸ್ವಾತಂತ್ರ್ಯಜೀವನಂ!
*(ದೂರದಿಂದ ಒಂದ ಗಾನವಾಣಿ ಕೇಳಿಸುತ್ತದೆ. ಬರುಬರುತ್ತಾ ಹತ್ತಿರ ಹತ್ತಿರವಾಗಿ ಸುಸ್ಪಷ್ಟವಾಗುತ್ತದೆ.)*

**ವಾಣಿ** – ಭಾರತಾಂಬೆಯೆ, ಜನಿಸಿ ನಿನ್ನೊಳು ಧನ್ಯನಾದೆನು, ದೇವಿಯೆ;
ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೆ.
ನಿನ್ನ ಕಂಗಳ ಪುಣ್ಯಕಾಂತಿಯೊಳೆನ್ನ ಕಂಗಳ ತೆರೆದೆನು;
ನಿನ್ನ ಅಂಕದ ಮಂಗಳಾಂಗಣದಲ್ಲಿ ನಲಿಯುತ ಮೆರೆದೆನು;
ನಿನ್ನ ಮೈಮೆಯ ಬರೆವೆನು; ನಿನ್ನ ಹೆಸರನೆ ಕರೆವೆನು;
ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು.

**ಭಾರತಾಂಬೆ** – ಆರ ದನಿಯಿದು? ಮನಕ್ಕಿನಿತು ಆಹ್ಲಾದಮಂ
ತರುತಿಹುದು! ಸುಪರಿಚಿತಮೆಂಬಂತೆ ಸೊಗಸುತಿದೆ.
ಸ್ವಾತಂತ್ರ್ಯ ಸಂತೋಷ ಸುಖಗಳಂ ಮೊಗಸುತಿದೆ!
ಭರತಸುತನೈತರ್ಪನೆಂಬ ಸಂದೇಶಮನ್
ಆಲಿಸಿದ ಕಿವಿಗೆ ತನಿ ಜೇನಿಂಪನುಣಿಸುತಿದೆ.
*(ತೆಕ್ಕನೆ ಕಣ್ನಟ್ಟು)*
ಇದೇನ್ ಬೆಳಕು! ಮಿಂಚಿ ಕೋರೈಸುತಿದೆ!
ಕತ್ತಲೆಯ ಗಬ್ಬದಿಂ ಕೇಸುರಿಯ ಆಸೆವೂ
ಮಲರಿ ಬರುವಂತೆ ಬಳಿಸಾರುತಿಹುದು!
ಓವೋ, ಪೊಂಚು ಪಿಡಿದೈತರ್ಪನೆನ್ನ ಕಂದಂ!
ಕಯ್ಯೊಳೇನ್ ಬಾವುಟಂ!
ಕತ್ತರಿಸಿ ತುಂಡಾದ ಸಂಕೋಲೆಗಳ್
ನೇಲುತಿವೆ ಕೈ ಕಾಲ್ಗಳಿಂ!
ತಲೆಗೆದರಿ ತೋರ್ಪನುನ್ಮತ್ತನೋಲ್,
ಮತ್ತದೇನ್ ನೆತ್ತರ್! ಪರಿದುಡುಗೆ!
*(ಓಡಿಹೋಗಿ ಅವನನ್ನು ಆಲಿಂಗಿಸಲು ಪ್ರಯತ್ನಿಸುತ್ತಾಳೆ. ಆದರೆ ಕೈಕಾಲುಗಳ ನಿಗಳ ಬಂಧನದ ದೆಸೆಯಿಂದ ಹತಾಶ ಳಾಗಿ)*
ಅಯ್ಯೊ ಮರೆತಿದ್ದೆ ನಾನ್
ಅಸ್ವತಂತ್ರೆ ಎಂಬುದನ್!

*[ಭರತಸುತನು ಬರುತ್ತಾನೆ. ಅವನ ಎಡದ ಕೈಲಿದ್ದ ಮಿಂಚುಂಪೊಂಜಿನ ಬೆಳಕಿನಿಂದ ದೇಗುಲ ಬೆಳಗುತ್ತದೆ. ಅವನ ತಲೆ ಕೆದರಿದೆ. ಕೈಕಾಲುಗಳಲ್ಲಿ ಕತ್ತರಿಸಿದ ಸಂಕೋಲೆಯ ತುಂಡುಗಳಿವೆ. ರಕ್ತದ ಕಲೆ ತುಂಬಿದ ಉಡುಗೆ ಹರಿದು ಹೋಗಿದೆ. ಮುಖದ ಗಾಯಗಳು ಭಯಾನಕವಾಗಿವೆ. ಬಲಗೈಯಲ್ಲಿ ಹಿಡಿದು ಹೆಗಲಮೇಲೆ ಆತುಕೊಂಡಿದ್ದ ಧ್ವಜಕಾಷ್ಠದ ತುದಿಯಲ್ಲಿ*

*ಚರಕ ಚಿಹ್ನೆಯ ತ್ರಿವರ್ಣ ಧ್ವಜ ತೂಗುತ್ತಿದೆ. ದೊಡ್ಡದೊಂದು ಕೀಲಿಕೈ ರಕ್ತಮಯವಾಗಿ ವಕ್ಷದ ಮೇಲೆ ನೇತಾಡುತ್ತಿದೆ. 'ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು' ಎಂಬ ಚರಣ ಮುಗಿಯುತ್ತಿರುವಾಗ ಪ್ರವೇಶಿಸುತ್ತಾನೆ. ಹೊರಗೆ ದೂರದಲ್ಲಿ ವಾದ್ಯ ಸಂಭ್ರಮ ಮೊದಲಾಗುತ್ತದೆ.]*

**ಭರತಸುತ** – *(ಧ್ವಜವೆತ್ತಿ ಉತ್ತಾಲ ಧ್ವನಿಯಿಂದ)*
ಗೆಲ್, ತಾಯೆ, ಗೆಲ್!

**ಭಾರತಾಂಬೆ** – *(ಬಂಧಿತವಾದ ಕೈಗಳನ್ನು ಎತ್ತಲೆಳಸಿ ಗದ್ಗದದಿಂದ)*
ಬಾಳ್, ಮಗುವೆ, ಬಾಳ್.

**ಭರತಸುತ** – *(ಕೊರಳೆತ್ತಿ)* ಆಳ್! ಜಗವಾಳ್!
*(ಮಿಂಚುಂಪೊಂಜನ್ನು ಒಂದೆಡೆ ಇಟ್ಟು, ಧ್ವಜವನ್ನು ಒಂದು ಕಡಿ ನೆಟ್ಟು 'ವಂದೇ ಮಾತರಂ!' ಎಂದು ಆಘೋಷಿಸುತ್ತಾ ಸಾಷ್ಟಾಂಗ ಪ್ರಣಾಮಮಾಡಿ ಎದ್ದು ನಿಂತು ಗುಡಿ ಗುಡುಗುವಂತೆ ಆಘೋಷಿಸುತ್ತಾನೆ.)*
ಗೆಲ್, ತಾಯೆ, ಗೆಲ್!
ಬಾಳ್, ತಾಯೆ, ಬಾಳ್!
ಆಳ್, ಜಗವನಾಳ್!

**ಭಾರತಾಂಬೆ** – *(ಹರ್ಷಾಧಿಕ್ಯದಿಂದ ಸಗದ್ಗದೆಯಾಗಿ)*
ಬಂದೆಯಾ, ಮಗು.

**ಭರತಸುತ** – *(ಉಲ್ಲಸಿತನಾಗಿ)*
ಬಂದೆನ್! ತಂದೆನ್! ಇದೆಕೊ ಕಾಣ್!
*(ವಕ್ಷದ ಮೇಲೆ ನೇಲುತ್ತಿದ್ದ ಕೀಲಿಕೈಯನ್ನು ನಿರ್ದೇಶಿಸುತ್ತಾನೆ)*

**ಭಾರತಾಂಬೆ** – ವತ್ಸ, ಇದೇನ್ ಕೆನ್ನೀರ್!

**ಭರತಸುತ** – ನೆತ್ತರೊಳ್ ಮುಳುಗಿರ್ದುದನ್ ಎತ್ತಿ ತಂದೆನ್, ತಾಯಿ.

**ಭಾರತಾಂಬೆ** – ಪರಕೀಯ ವೈರಿಗಳ್ ಚೆಲ್ಲಿದುದೆ?

**ಭರತಸುತ** – ಅಲ್ತಲ್ತು, – ನಮ್ಮವರ್ ಚೆಲ್ಲಿದುದೆ!
ಪರಕೀಯ ವೈರಿಗಳ್ ಚೆಲ್ಲಿದಾ ಶೋಣಿತಮ್
ಹಸುಗೊರಸು ನೀರ್, ನಮ್ಮವರ್ ಚೆಲ್ಲಿದಾ

ಕಡಲದಿರ್! ಈ ನಿನ್ನ ಶೃಂಖಲೆಯಗಳಂ ಬಿಗಿದ
ಬೀಗಮಂ ತೆಗೆವ ಕೀಲಿಕೈ ಮುಳುಗಿರ್ದುದಾ
ಸೋದರ್ ಸೋದರರ ಮೈಯಿಂದೆ ಚೆಲ್ಲಿದಾ
ಮತವೈರ ಸಂಜಾತ ರುಧಿರ ಪ್ರವಾಹದೊಳ್!

**ಭಾರತಾಂಬೆ** – ಅಯ್ಯೊ ಇಲ್ಲಿಯಂ, ಬಿಡುಗಡೆಯ ಪಡೆವಲ್ಲಿಯುಂ,
ನಾನೆಂತಪ್ಪ ದುರ್ಭಾಗ್ಯೆಯೆನ್!
ಅನ್ಯರಿಂ ಪಡೆವಡೆಯೊಳಂದು ಬಲಿದಾನಂ!
ನನ್ನವರೆ ಕೊಡುವೆಡೆಯೊಳಿಂದು ಬಲಿದಾನಂ!
ಇನ್ನುಮೆನಿಕಿರ್ಕುಮೋ ಮುನ್ ಬಲಿಯ ದಾನಂ!

**ಭರತಸುತ** – ಅಳಲದಿರ್, ತಾಯೆ, ಅಳಲ್ಕಿದು ಪೊಳ್ತಳು.
ನಿನ್ನಂ ಮೊದಲ್ ಸ್ವತಂತ್ರೆಯಂ ಮಾಳ್ಪೆನ್.
ಅನಂತಂ ನೋಳ್ಪಮೀ ನಿನ್ನ ಸ್ವಾತಂತ್ರ್ಯದಿಂ
ಸಂಭಿವಿಪ ಸದ್ಬುದ್ಧಿಯಂ ಸಂತೃಪ್ತಿಯಂ, ಶಾಂತಿಯಂ!

*[ದೂರದಿಂದ 'ವಂದೇ ಮಾತರಂ' ಗೀತೆ ಕೇಳುತ್ತಿರಲು ಕೀಲಿಕೈಯಿಂದ ಬೀಗವನ್ನು ಕಳಚುತ್ತಾನೆ. ಸರಪಣಿಗಳ ಖಣಿ ಖಣಿಲ್ ಕಳಚಿ ಬೀಲುತ್ತವೆ. ಹೂಮಳೆ ಸುರಿಯುತ್ತದೆ. ಮಂಗಳವಾದ್ಯ ಮೊಳಗುತ್ತವೆ. ಭರತಸುತನು ಸ್ವಾತಂತ್ರ್ಯೆಯಾದ ಭರತಮಾತೆಯನ್ನು ಕಣ್ಣರಳಿಸಿ ನೋಡುತ್ತ ಬಹು ಕಂಠಂಗಳಿಗೆ ತನ್ನ ಕಂಠವನ್ನೂ ಸೇರಿಸಿ ಹಾಡುತ್ತಾನೆ.]*

**ಸರ್ವಗೀತೆ**

ಲೋಕ ಮಲಗಿದಂದು ನೀ ನಟ್ಟನಡೂ ರಾತ್ರಿ
ಎಚ್ಚರಾಂತೆ, ಅವಿಶ್ರಾಂತೆ; ಆದೆ ಪುನರ್ಯಾತ್ರಿ.
ಸರ್ವಕಾಲ ಸರ್ವದೇಶ ಸರ್ವಮೋಕ್ಷ ಮಂತ್ರೇ,
ಅಸ್ವತಂತ್ರತ್ರೆ ಸುಸ್ವತಂತ್ರೆಯಾದ ವಿಶ್ವತಂತ್ರೇ.
ಏಳು ತಾಯಿ, ಬಾಳು ತಾಯಿ, ಜಗತ್ ಕಲ್ಯಾಣಿ;
ಯುಗಯುಗಾಯು ಜಗವನಾಳು, ಧರ್ಮಚಕ್ರಪಾಣಿ;
ದಿಗ್‌ದಿಗಂತ ರಣಿತಮಕ್ಕೆ ನಿನ್ನ ದಿವ್ಯವಾಣಿ.
ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ, ರಾಣಿ!
ಶಾಂತಿ ಸತ್ಯ ಮುಕ್ತಿ ಧರ್ಮ ತತ್ತ್ವ ಮಹೋದಾತ್ತೆ,

ಕಾವ್ಯ ಶಿಲ್ಪ ನೃತ್ಯ ಗಾನ ಸಕಲ ಕಲಾವೇತ್ತೆ,
ಶ್ರದ್ಧೆಯಾಗಿ ಬುದ್ಧಿಯಾಗಿ ತಪಸ್ ಶಕ್ತಿಯಾಗಿ
ನಡಸು ನಮ್ಮನೆಲ್ಲ, ಅಮ್ಮ, ಪೂರ್ಣಸಿದ್ಧಿಗಾಗಿ!
ನಮೋ ದೇವಿ! ನಮೋ ತಾಯಿ! ನಮೋ ಭರತಮಾತೆ!
ನಮಸ್ ಸತ್ಯೆ! ನಮೋ ನತ್ಯೆ! ನಮೋ ಜಗನ್ಮಾತೆ!

## ದೃಶ್ಯ ೩

*[ಜೀರ್ಣೋದ್ಧಾರವಾದ ಕಾಳಿಕಾದೇವಾಲಯ ದೀಪ್ತವಾಗಿದೆ. ಆದರೆ ಒಳಗೆ ತುಸು ದೂರದಲ್ಲಿ ಗರ್ಭಗುಡಿಯಲ್ಲಿ ಮಾತ್ರ ಹಣತೆಯ ಹಂತಿ ಉರಿಯುತ್ತಿರುವುದರಿಂದ ಕಾಂತಿ ತಂಬೆಳಕು ಬೀರಿ ಹಿತಮಂದವಾಗಿದೆ. ದೇವತಾಮೂರ್ತಿ ಸುಂದರವಾಗಿ ಅಲಂಕೃತವಾಗಿದೆ. ಹೂವಿನ ಹಾರ ಮೊದಲಾದ ಚಿಹ್ನೆಗಳಿಂದ ಆಕೆ ಸುಪೂಜಿತೆ ಎಂಬುದು ಕಾಣುತ್ತದೆ. ಪರಿಮಳ ದ್ರವ್ಯಗಳ ಧೂಮ ಪವಿತ್ರವಾಗಿ ವ್ಯಾಪಿಸಿದೆ. ದೇವಾಲಯ ಸಮಸ್ತವೂ ಅಶೋಕ ಚಕ್ರಾಂಕಿತವಾದ ತ್ರಿವರ್ಣ ಧ್ವಜಗಳ ಗುಡಿತೋರಣಗಳಿಂದ ಮನೋಹರವಾಗಿ ರಂಜಿಸುತ್ತಿದೆ. ಮಾವು ಹಲಸು ಬಾಳೆ ಮೊದಲಾದ ಸಸ್ಯಯಗಳೂ ತಮ್ಮ ಕಾಣಿಕೆಯನ್ನು ಸಲ್ಲಿಸಿವೆ. ಸೂರ್ಯೋದಯವಾಗಿದೆ. ಕೋಗಿಲೆ ಮೊದಲಾದ ಹಕ್ಕಿಗಳುಲಿ ಕೇಳಿ ಬರುತ್ತದೆ. ದೇಗುಲದಾಚೆ ದೂರದಲ್ಲಿ ಮೇಘಚುಂಬಿಯದ ಧ್ವಂಜಸ್ತಂಭವೊಂದು ಗೋಚರಿಸುತ್ತದೆ. ತುದಿಯಲ್ಲಿ ಭೀಮ ಭವ್ಯಭಾವವನ್ನು ಹೃದಯದಲ್ಲಿ ಪ್ರಚೋದಿಸುವ ಒಂದು ಬೃಹದಾಕಾರದ ನವಭಾರತದ ಚಕ್ರಾಂಕಿತ ತ್ರಿವರ್ಣಕೇತನ ಹಾರಾಡುತ್ತಿದೆ. ಕೆಳಗೆ ಆ ಧ್ವಜಸ್ತಂಭದ ಸುತ್ತಲೂ ಇರುವೆ ಮುತ್ತಿದಂತೆ ಜನಸಂದಣಿ ಮುತ್ತಿದೆ. ತುಮುಲ ಜನಘೋಷ ಕೇಳಿಸುತ್ತಿದೆ. ವಿಮಾನ ಹಾರಿದ ಸದ್ದು, ಉತ್ಸವ ಸೂಚಕವಾದ ಫಿರಂಗಿಗಳ ಧಂಕಾರ ದಿಕ್ಕುದಿಕ್ಕುಗಳಿಂದ ಅನುರಣಿತವಾಗಿ ಮೊಳಗಿ ಮುಳುಗುತ್ತದೆ.*

*"ವಂದೇ ಮಾತರಂ" "ಭಾರತ ಮಾತಾಕಿ ಜೈ"*

*"ಮಹಾತ್ಮ ಗಾಂಧೀಕಿ ಜೈ!" ಮೊದಲಾದ ಘೋಷಣೆಗಳು ನಭೋಮಂಡಲ ಭೇದನಕರವಾಗಿ ಏಳುತ್ತವೆ. ಕೊನೆಗೆ ಧ್ವಜಗೀತಗಾನ ಸುಶ್ರಾವ್ಯವಾಗಿ ನವಚೇತನೋದ್ದೀಪಕರವಾಗಿ ಕೇಳಿಬರುತ್ತದೆ.]*

ಜಯ ಜಯ ಜಯ ವಿಜಯೀ ಭವ, ಹೇ ವೈಜಯಂತಿ!
ನಿನ್ನ ನೆಳಲೊಳೇಳ್ಗೆವಡೆದು ಗೆಲ್ಗೆ ಭುವನ ಶಾಂತಿ!
ಓ ಸುವರ್ಣೆ, ಹೇ ಅವರ್ಣೆ, ನೀಲಿಮಾ ತ್ರಿವರ್ಣೆ,
ಉಷಸ್ ಪೀತೆ, ದಿವಾಶ್ವೇತೆ, ನಿಶಾನ್ಯೆಲ ಜಾತೆ,

ಅಮೃತ ದಿವ್ಯ ಖಚಿತ ಭವ್ಯ ಧರ್ಮಚಕ್ರರಾಜಿತೆ
ಪ್ರೇಮ ನಿನ್ನ ಪರಮ ಅನ್ನವಾಗಲವನಿಪೂಜಿತೆ!

ಮೈತ್ರಿ ಸಹನೆ ಶಾಂತಿಗಾಗಿ ನಭೋಗಾಮಿಯಾಗು!
ಪೊಡವಿಯಾಳು! ಕಡಲ ಸೀಳು! ಗೆಲ್ಲು, ಬಾಳು, ಹೋಗು!
ಗ್ಲಾನಿಯೆಲ್ಲಿ ಹಾನಿಯೆಲ್ಲಿ ಅಲ್ಲಿ ರಕ್ಷೆಯಾಗು;
ಕ್ರೌರ್ಯವೆಲ್ಲಿ ಪಾಪವೆಲ್ಲಿ ಅಲ್ಲಿ ಶಿಕ್ಷೆಯಾಗು;
ಕ್ಷಾಮ ಕಷ್ಟ ನಷ್ಟಗಳಲಿ ನೀ ಸುಭಿಕ್ಷೆಯಾಗು;
ಸದಾಕಾಲ ಸರ್ವದೇಶ ಸಕಲ ಮಿತ್ರನಾಗು!
ಹಾರು, ಏರು, ಓ ಧ್ವಜವೆ,
ವೈನತೇಯ ಸಮದ್ವಿಜವೆ!
ಚಂದ್ರ ಚುಂಬಿ, ಸೂರ್ಯ ಚುಂಬಿ, ಖಚರ ಚರಣ ಚುಂಬಿ,
ಹಾರು, ಏರು, ನೋಡುತಿಹುದು ನಾಡು ನಿನ್ನ ನಂಬಿ!
ಅಮರ ಬಾಹು, ಅಸುರ ರಾಹು, ನೆಲಕೆ ಮುಗಿಲ ಕಾಹು;
ಕರ್ಮಜಗಕೆ ಧರ್ಮಪುರುಷನಿಟ್ಟ ಬೆರಳ ಬೇಹು:
ಹೇ ತ್ರಿವರ್ಣ ಕೇತನ,
ನೀನೆ ನಮ್ಮ ಚೇತನ;
ಪ್ರೇಮ ಧೈರ್ಯ ಸತ್ಯ ದರ್ಮ ಶಾಂತಿ ಚಿರನಿಕೇತನ!
ಜಯ ಜಯ ಜಯ ವಿಜಯೀ ಭವ, ಹೇ ವೈಜಯಂತಿ!
ಜಯ ಜಯ ಜಯ ವಿಜಯೀ ಭವ, ಹೇ ವೈಜಯಂತಿ!

*[ಗೀತೆ ಪೂರೈಸುವುದರೊಳಗೆ ಭರತಸುತನು ಕೈಯಲ್ಲೊಂದು ಹೂವಿನ ಮಾಲೆ ಹಿಡಿದು ಅತ್ಯುತ್ಸಾಹದಿಂದ ಅತ್ಯುಲ್ಲಾಸದಿಂದ ನುಗ್ಗಿ ಬರುತ್ತಾನೆ. ಸುತ್ತಲೂ ಹುಡುಕು ನೋಟವಟ್ಟಿ ನೋಡುತ್ತಾನೆ. ಅಚ್ಚು ಬಿಳಿಯ ಖಾದಿಯ ಉಡುಪು ಉಟ್ಟಿದ್ದಾನೆ. ತಲೆಯಲ್ಲಿ ತ್ರಿವರ್ಣ ಧ್ವಜಾಂಕವಾದ ಖಾದಿ ಟೊಪ್ಪಿಗೆಯಿದೆ. ಎದೆಯ ಮೇಲೂ ಒಂದು ಬಾವುಟ ಚುಚ್ಚಿಕೊಂಡಿದ್ದಾನೆ.]*

**ಭರತಸುತ** – ಗೆಲ್, ತಾಯೆ, ಗೆಲ್!
ಬಾಳ್ ತಾಯೆ, ಬಾಳ್!
ಆಳ್ ಜಗವಾಳ್!
*(ಎಲ್ಲಿಯೂ ಭರತಮಾತೆಯನ್ನು ಕಾಣದೆ ಅಚ್ಚರಿಯಿಂದ ಕಣ್ಣ ಸುಳಿಸಿ)*
ಎಲ್ಲಿದಳ್ ಜನನಿ? ಎತ್ತುಪೊದಳ್!

ಮಕ್ಕಳೆಲ್ಲರ್ ಸಂಭ್ರಮದಿ ಕುಣಿಯುತಿರೆ,
ಸ್ವಾತಂತ್ರ್ಯದುತ್ಸವಕೆ ಸೊಗಮುಕ್ಕಿ ತಣಿಯುತಿರೆ,
ಗೆಲ್ಗೆ ತಾಯ್, ಬಾಳ್ಗೆ ತಾಯ್, ಆಳ್ಗೆ ತಾಯ್
ಎಂದನಿಬರುಂ ಕೊರಳೆತ್ತಿ ಕೂಗುತಿರೆ
ಎಲ್ಲಿದಳ್ ಜನನಿ? ಎತ್ತವೋದಳ್?
ಪೂಮಾಲೆಯಂ ನೆಯ್ದು ತೊಡಿಸಲೆಂದೋಡಿ ಬಂದೆನ್
ಸಿಂಗರಿಸಿ ಕಾಲ್ಗೆರಗಿ ನಲಿಯಲೆಂದೋಡಿ ಬಂದೆನ್! –
ಕಾಣಿಸಳ್! *(ನಸುನಗುತ್ತಾ)*
ಅಡಿಯ ಸಂಕೋಲೆಗಳ್ ಪರಿದುದಕೆ
ಇದೆ ಮೊದಲ ಪರಿಣಾಮವೋ ಏನ್?
ಗುಡಿಯೊಳಿನ್ನೆವರಂ ಸೆರೆಯಿರ್ದ ಬೇಸರಕೆ
ನಾಡನಲೆಯುವ ಸೊಗಕೆ ಬಗೆದಂದಳೇನ್?
ಅಲೆವಾಸೆಯಿರ್ಪೊಡೇನ್ ನಾಳೆ ಇರಲಿಲ್ಲವೇ?
ನಾಡೆಲ್ಲ ನೋಡುವಾಸೆಯೊಳಿರಲ್
ಇಂತು ಕಣ್ಮರೆಯಾಗುವುದೆ, ಪೂಜ್ಯೆ?
ಮೇಣ್, ಜಗದಂಬೆ ಕಾಳಿಕಾ ವಿಗ್ರಹದೊಳೇನ್
ಐಕ್ಯಮಾದಳೊ ನೋಳ್ಪೆನ್.
*[ಹೋಗಿ ನೋಡುತ್ತಾನೆ. ಅಲ್ಲಿಯೂ ಅವಳು ಕಾಣಿಸದಿರಲು ಜಗದಂಬೆಯನ್ನು ಕೈಮುಗಿದು ಸ್ತುತಿಸುತ್ತಾನೆ.]*
ಸರ್ವಮಂಗಳ ಮಾಂಗಲ್ಯೆ ಶಿವೇ ಸರ್ವಾರ್ಥ ಸಾಧಿಕೇ
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತು ತೇ.
ಸೃಷ್ಟಿಸ್ಥಿತಿವಿನಾಶಾನಾಂ ಶಕ್ತಿಭೂತೇ ಸನಾತನೀ
ಗುಣಾಶ್ರಯೇಗುಣಮಯೇ ನಾರಾಯಣಿ ನಮೋಸ್ತು ತೇ.
ಶರಣಾಗತ ದೀನಾರ್ತ ಪರಿತ್ರಾಣ ಪರಾಯಣೇ
ಸರ್ವಸ್ಯಾರ್ತಿ ಹರೇ ದೇವಿ ನಾರಾಯಣಿ ನಮೋಸ್ತು ತೇ.
ಸರ್ವ ಸ್ವರೂಪೇ ಸರ್ವೇಶೇ ಸರ್ವಶಕ್ತಿ ಸಮನ್ವಿತೇ
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೂಸ್ತು ತೇ.
*(ಜಗದಂಬೆಯಲ್ಲಿ ಭರತಮಾತೆ ಕಾಣಿಸಿಕೊಳ್ಳುತ್ತಾಳೆ)*
ಇದೇನ್ ಜನನಿ, ನನಗೀ ರೂಪಾಂತರಂ?

**ಭಾರತಾಂಬೆ** – ನಾನೆ ಅವಳ್, ಅವಳೆ ನಾನ್, ಮಗೂ.
ಏಕೆ ಬೆಕ್ಕಸಂ ನಿನಗೆ ಸುಜ್ಞಾನಿಗೆ?
ನೀನೆ ಹಾಡುವೆಯಲ್ತೆ:
"ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ" ಎಂದು!

**ಭರತಸುತ** – ಅಂತೆ ಹಾಡುವೆನದು ದಿಟಂ
ಆದೊಡಂ ಇನ್ನೆಗಂ ಅದನಿಂತುಟರಿಯೆನ್.
ಕವಿಕಲ್ಪನಾ ಮಾತ್ರಮೆಂದುದಂ
ರೂಪಕೋಕ್ತಿಯ ಚಮತ್ಕಾರಮೆಂದುಂ
ಅಲಂಕಾರ ಮಾತ್ರಮೆಂದಿರ್ದೆನ್.
ಇಂದು ಸಾಕ್ಷಾತ್ಕಾರಮಾಯ್ತು ಹೃದಯಸತ್ಯಂ
ನಿನ್ನ ಕೃಪೆಯಿಂ. ದೇವಿ.

**ಭಾರತಾಂಬೆ** – ಋಷಿಯಲ್ಲದಾತನಾ ಕವಿತೆ ಮಿಥ್ಯೆಯಾದೊಡಂ
ಋಷಿಯಾದ ಕವಿಯ ಕಾವ್ಯಂ ಸತ್ಯಮೇಗಳುಂ!
ನಿನಗದಾವುದು ಭಯಂ? ಏಕೆನ್ನನರ್ಥಿಸಿದೆ?

**ಭರತಸುತ** – ಸ್ವಾತಂತ್ರ್ಯದುತ್ಸವಕೆ ಜನ ಸಮುದ್ರಂ ನೆರದು
ಸ್ವಸ್ತಿಯಂ ಘೋಷಿಸಿದೆ. ನಿನ್ನ ಕಾಣಲ್ಕಿವರ್
ಕಾತರದಿ ಕಾಯತಿಹರಲ್ಲಿ ನೋಡಲ್ಲಿ ಕಾಣ್!
*[ಧ್ವಜವಂದನಾ ದೃಶ್ಯವನ್ನು ತೋರಿಸುತ್ತಾನೆ.]*
ಇಲ್ಲಿ ನಿನ್ನನ್ ಕಾಣದೆಲ್ಲಿದಳ್ ತಾಯೆಂದು
ಕಾತರದಿ ಕೂಗಿದೆನ್.

**ಭಾರತಾಂಬೆ** – *(ನಸುನಗುತ್ತ)*
ನಾನಿನ್ ಅಶರೀರಿ
ಮೇಣ್ ವಿರಾಟ್ ಶರೀರಿ. ನನ್ನನೇನ್
ಆ ಅನ್ಯರೆಸಗಿದೊಲ್ ಗುಡಿಯೊಳೆಯೆ ಸೆರೆಗೈದು
ಪೂಜಿಸಲ್ ಬಗೆವಾ? ಕರ್ಬೊನ್ನ ಸಂಕೋಲೆಯಂ
ಕಳಚಿ, ಚಂಬೊನ್ನ ಮಿಳಿಗಳಿಂ

ಸ್ವಾತಂತ್ರ್ಯದರ್ಥಮಂ ಬಂಧಿಸದಿರನರ್ಥದಿಂ.
ನುಡಿವರೆಡೆಯಿಂ ಮಿಗಿಲ್ ದುಡಿವರೆಡೆ ಸೊಗಸೆನಗೆ!

**ಭರತಸುತ** – ಮನ್ನಿಸೆನ್ನನ್, ಪೂಜ್ಯೆ, ನಿನ್ನ ಸ್ವಾತಂತ್ರ್ಯಮಂ
ಬಂಧಿಸಲ್ ಬಗೆದಂದೆನಲ್ತು. ಉತ್ಸವಕೆ
ಬಿಜಯ ಗೆಯ್ ಎಂದು ಕೇಳಲ್ಕೆ ಬಂದೆನ್.

**ಭಾರತಾಂಬೆ** – ಆವುದುತ್ಸವಮೆನಗೆ?

**ಭರತಸುತ** – ಏಕಮ್ಮಾ! ಸ್ವಾತಂತ್ರ್ಯದುತ್ಸವಂ!

**ಭಾರತಾಂಬೆ** – ಆವುದಾ ಸ್ವಾತಂತ್ರ್ಯಂ?

**ಭರತಸುತ** – ನಾಮೆಲ್ಲರಿತ್ತ ಬಲಿದಾನಂಗಳಿಂ ಪಡೆದ
ಭಾರತ ಸ್ವಾತಂತ್ರ್ಯಂ!

**ಭಾರತಾಂಬೆ** – ಬಾಹ್ಯ ಬಂಧನಗಳಂ ಕಳಚಿದಿರಿ ದಿಟಂ
ಆಂತರದ ಶೃಂಖಲೆಗಳೊಳವು ವಜ್ರೋಪಮಂ.
ಅವುಗಳಂ ಕಡಿವ ದುಡಿಮೆಯೊಳಿರ್ಪನೆಡೆಗೆ
ನಾನೆಯ್ದಿದೆನ್, ನೆರವೀಯಲೆಂದಾತಂಗೆ!

**ಭರತಸುತ** – ಆವೆಡೆಗೆ? ಆರವನ್? ಸ್ವಾತಂತ್ರ್ಯದುತ್ಸವಕೆ
ಮಕ್ಕಳೆಲ್ಲರ್ ಇಲ್ಲೆ ನೆರದಿರ್ಪರಮ್ಮಾ!

**ಭಾರತಾಂಬೆ** – ಮರೆತೆಯೇನ್? ನೀಂ ತಂದ ಕೀಲಿ ಕೈಯಂ,
ನೆತ್ತರೊಳ್ ಮುಳುಗಿರ್ದುದಂ? –
ಬೆನ್ನಟ್ಟುತಿರ್ಪುದಾ ಭೂತಮಿನ್ನುಂ!
ಖಿನ್ನನಾಗದಿರ್.
ಅನಿವಾರ್ಯಮದಕೆ ನೀನಲ್ತು ಕಾರಣಂ.
ಎಲ್ಲರುಂ ಇಲ್ಲೆ ನೆರೆದಿಹರೆಂದೆಯಲ್ತೆ?
ಎಲ್ಲಿ ತೋರೆನಗಿಲ್ಲಿ ಆ ಸ್ವಾತಂತ್ರ್ಯ ಶಿಲ್ಪಿಯಂ?

**ಭರತಸುತ** – *(ಬೆರಗಾಗಿ ನೋಡಿ)*
ಕಾಣೆನಾ ಪುಣ್ಯಾತ್ಮನಂ! ಎಲ್ಲಿದನ್, ತಾಯಿ?

**ಭಾರತಾಂಬೆ** – ದಿವ್ಯಶಕ್ತಿಯನಿತ್ತಪೆನ್; ಕೇಳ್: ಕಾಣ್:
*(ಭರತಸುತ ಆಲಿಸುತ್ತಾನೆ: ಬಹುದೂರದಿಂದ ರಾಮನಾಮ ಇಂಪಾಗಿ ಕರುಣಪೂರ್ವಕವಾಗಿ ತೇಲಿ ಬರುತ್ತದೆ.)*

**ವಾಣಿ** – ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರೇ ನಾಮ್
ಸಬಕೋ ಸನ್ಮತಿ ದೇ ಭಗವಾನ್!

**ಭಾರತಾಂಬೆ** – ಏನ್ ಕಾಣುತಿದೆ ನಿನಗೆ?

**ಭರತಸುತ** – ಬೆಟ್ಟಗಳ್; ಕಾಡುಗಳ್; ಬತ್ತದ ಪಯಿರ್ ಪಸುರೆನೆ
ಬಿತ್ತರದ ಗದ್ದೆಗಳ್; ಮಳೆಮುಗಿಲ ತುಂಬುಬಾನ್;
ಉಕ್ಕಿ ಹರಿಯುವ ಹೊಳೆಯ ಹೊನಲುಗಳ್; ಆ ಎಲ್ಲ
ಹಿನ್ನೆಲೆಯ ಚಿತ್ರಮಯ ಪಟದ ವಿಸ್ತೀರ್ಣದೊಳ್
ಅಮೃತಭಾಗೀರಥಿಯೆನಲ್ ಪರಿಯುತಿದೆ ಪಾಲ್‌ಪೊನಲ್,
ಬೆಳ್ಪರಳೆಯಂ ಹಿಂಜಿ ತೆರೆತೆರೆ ಹರಹಿದೊಂದು
ಬೆಳ್ಮುಗಿಲ ಹೊಳೆಯುವೋಲ್. ಕಣ್ಗಂತೆ ತೋರಿದುದೆ
ತರುತಿಹುದು ಕಿವಿಗಿಂಪು ರಾಮನಾಮದ ಗಾನಮಂ.

**ಭಾರತಾಂಬೆ** – ನೀನ್ ಕಾಣ್ಬುದದು ವಂಗದೇಶದೊಳ್
ನವಕಾಲಿ ಎಂಬಾಪ್ರದೇಶಂ.
ಕೆಲದಿನಗಳಿಂದಲ್ಲಿ ಮೂರ್ಖರೊಳ್ ಕೆರಲಿರ್ಪ
ಮತವೈರ ವಿಷದುರಿಗಳಂ ನಂದಿಸಲ್
ಅಮೃತಸ್ವರೂಪನಪ್ಪಾ ಸ್ವಾತಂತ್ರ್ಯ ಶಿಲ್ಪಿ
ಯಾತ್ರಿಯಾಗಿರ್ಪನರಿಯೆಯಾ ನೀನ್!
ಆ ಪ್ರವಾಸಮೆ ನಿನ್ನತೀಂದ್ರಿಯಕ್ಕಾ
ಪ್ರತಿಮಾ ವಿಧಾನದಿಂದಮೃತಪ್ರವಾಹದೊಲ್
ಗೋಚರಿಸಿತೈಸೆ! ನೀಂ ತೋರ್ದುದಕೆ ಪಿರಿಯ

ಸ್ವಾತಂತ್ರ್ಯದುತ್ಸವಂ ಅದು ಕಣಾ!
ಪೋಗಿರ್ದೆನಲ್ಲಿಗಾನ್, ದಿವ್ಯಯಾತ್ರೋತ್ಸವಕೆ,
ಶಕ್ತಿಯಾಗಲ್!

**ಭರತಸುತ** – *(ದುಃಖದಿಂದ ವಿಷಣ್ಣನಾಗಿ)*
ಎಂದಿಗಮ್ಮಾ ಮುಗಿವುದೆಮ್ಮೀ ಅಳಲ್?
ಈಗಳೀಗಳೆ ಮುಡಿದೆಮ್ಮ ಸೂರ್ಯಂಗೆ
ಮತ್ತಿದೇನೀ ಮತರಾಹು ಪೀಡೆ?
ಇನ್ನೆಗಂ ನಾಮಿತ್ತ ಬಲಿದಾನದಿಂ
ತೃಪ್ತಳಾಗಳೆ ದೇವಿ?

**ಭಾರತಾಂಬೆ** – *(ಸಂತಯಿಸುವಂತೆ)*
ಮಗೂ, ಬಲಿದಾನಕುಂಟೆ ಕೊನೆ?
ಬಲಿ ಪರಂಪರೆಯಲ್ತೆ ಸ್ವಾತಂತ್ರ್ಯಜೀವನಂ!

**ಭರತಸುತ** – ಬಲಿಗಂಜಿ ನಾನ್, ತಾಯಿ,
ಶಾಂತಿಸಿದ್ಧಿಗದು ಮಾರ್ಗಮಾಗಲ್ಕೆ!

**ಭಾರತಾಂಬೆ** – *(ಮುಗುಳುನಗೆಯೊಂದನ್ನು ಸುಳಿಸಿ ಸುಯ್ದು)*
ಶಾಂತಿ! ಶಾಂತಿ! – ಶಾಂತಿ ಸಿದ್ಧಿಯೆ, ಮಗೂ?

**ಭರತಸುತ** – ಹೌದಮ್ಮಾ.

**ಭಾರತಾಂಬೆ** – ಅದಕ್ಕೆ ವೆಳ್ಕುಂ ಪರಮ ಬಲಿದಾನಂ!
ನೀನ್ ಕಂಡುದಾ ಯಾತ್ರೆ ತಾನ್ ಅದಕೆ
ಪೀಠಿಕಾಮಾತ್ರಂ.

**ಭರತಸುತ** – *(ಕಿನಿಸಿ)*
ಬಿಚ್ಚಿ ನುಡಿ, ತಾಯಿ; ಮುಚ್ಚುನುಡಿಯಂ ಮಾಣ್!
ಕೈಕೊಂಡ ಯಾಗದೊಳ್ ವಿಜಯಿಯಪ್ಪನೆ ಪೇಳ್
ನಮ್ಮಾ ಮಹಾತ್ಮನ್? ವಿಷವೀಂಟಿ ಬರ್ದುಕುವನೆ?
ನೀನ್ ರಕ್ಷಿಸಲೆ ವೇಳ್ಕುಮಾತನನ್!

**ಭಾರತಾಂಬೆ** – ಇಲ್ಲಿ ಗೆಲ್ಲುವನದಕೆ ಸಂದೇಹವಿಲ್ಲ.
ಆದೊಡಂ....

**ಭರತಸುತ** – ಏನ್, ಆದೊಡಂ!....

**ಭಾರತಾಂಬೆ** – ಶಿಲ್ಪಿಯ ಸಮರ್ಪಣದಿ ಶಿಲ್ಪಕೃತಿಯೇಳ್ಗೆ!
ಆಲಿಸಿದೊ ಕಬ್ಬಿಗನ ಕೊರಲ್
ಸಾರುತಿದೆ ಸತ್ಯ ಸಂದೇಶಮಂ.

**ವಾಣಿ** – ಈಶ್ವರ ಕೃಪಾಬಲದ ಯಾಚನೆಯ ಸಲುವಾಗಿ
ಭೂಮಾತೆ ಕಳುಹಿಸಿಹ ದೂತಭಿಕ್ಷು;
ಈ ಲೋಕಮಂ ನಿರ್ನಿಮೇಷವಲೋಕಿಸುವ
ಆ ಲೋಕೃತದೊಂದಲೋಕಚಕ್ಷು;
ಸೃಷ್ಟಿಕರ್ತಂ ಸೃಷ್ಟಿ ತಾನಾಗಿ ಸೃಷ್ಟಿಯೊಳೆ
ದುಡಿಯುತಿರ್ಪುದಕವನೆ ದಿವ್ಯಸಾಕ್ಷಿ!
ಗಾಂಧಿಯೆಂಬಾ ಪೆಸರೆ ನಾಂದಿಯಾಗಲಿ ನಮ್ಮ
ಸ್ವಾತಂತ್ರ್ಯ ಸಂಭ್ರಮಕೆ. ಹಾಡು, ಪಕ್ಷಿ!

**ಭಾರತಾಂಬೆ** – ಗಾಂಧಿಯೆಂಬಾ ಪೆಸರೆ ನಾಂದಿಯಪ್ಪೊಡೆ ನಿಮ್ಮ
ಸ್ವಾತಂತ್ರ್ಯ ಸಂಭ್ರಮಕೆ – ಉಳಿವನಾತನ್!
ಇಲ್ಲದಿರೆ ತನ್ನ ಕೃತಿಯಭ್ಯುದಯಕಾಗಿ
ಶಿಲ್ಪಿ ತನ್ನನೆ ತಾನು ಬಲಿಗೊಡಲ್ ವೇಳ್ಕುಂ!

**ಭರತಸುತ** – ಅಂತಾಗದೆಂದಿಗುಂ: ಆತನಂ ಪಡೆದಿರಲ್,
ಸಿದ್ಧರಾವನಿಬರುಂ ಬೇಳ್ವೆಯಾಗಲ್!

**ಭಾರತಾಂಬೆ** – *(ಭಾರ ಹೃದಯೆಯಾಗಿ ಸುಯ್ದು)*
ಅದೆ ಆಸೆ ನನ್ನದುಂ; ಬಿದಿಯಿಚ್ಚೆ ಏನಿಹುದೊ!
*(ಅಕೆಯ ಕಣ್ಣುಗಳಿಂದ ಹನಿ ಬೀಳುತ್ತವೆ.)*

**ಭರತಸುತ** – *(ಉದ್ವೇಗದಿಂದ)* ಏಕಮ್ಮಾ ಈ ಅಳು?

*(ಭರತಮಾತೆ ವಿಕಟವಾಗಿ ನಗುತ್ತಾಳೆ. ಅಳುವಿಗಿಂತಲೂ ಭಯಂಕರವಾಗಿದ್ದ ನಗುವಿಗೆ ಬೆಪ್ಪಾಗಿ)*

ಏಕಮ್ಮಾ ಈ ನಗು!

**ಭಾರತಾಂಬೆ** – *(ದೂರದೃಷ್ಟಿಯಾಗಿ)*

ದುಃಖಾಶ್ರುತಳೆ ಆನಂದಬಾಷ್ಪಗಳ್! –

ಬಾ ಇಲ್ಲಿ, ಮಗೂ, *(ಭರತಸುತನು ಬಳಿಸಾರುತ್ತಾನೆ.)*

*ಕಣ್ಮುಚ್ಚಿ ಪೇಳ್ ನಿನಗೆ ಕಾಣ್ಬುದನ್.*

**ಭರತಸುತ** – *(ನಿದ್ರಿಸುತ್ತಾನೆಂಬಂತೆ ಕಣ್ಮುಚ್ಚಿ ನಿಲ್ಲುತ್ತಾನೆ.)*

ಎಲ್ಲಿಗೊಯ್ಯುವೆ ನನ್ನನ್ – ಅಮ್ಮಾ?.....

ಹಿಮಾಚಲವನೇರುತಿಹೆನಲ್ತೆ?....

ಏನ್ ಮೇಘಚುಂಬಿಗಳೊ ಈ ಶಿಖರಗಳ್!

ಏನ್ ಕುಳಿರ್! ಏನ್ ಐಕಿಲ್! ಏನ್ ಬೆಳ್ಪು!

ಇದಾವುದೀ ಶೃಂಗಂ?

ನಿಶ್ಶಿಕರ ಪರ್ವತಂಬೋಲ್ ಮುಗಿಲನಂಡಲೆದೆದ್ದು

ಧುಮಿಕಿ ಮರೆಯಾಗಿದೆ ನಭಃಪ್ರಪಾತದೊಳ್?

ಭಮ್ಯಮದೆ ದಿಟಂ ಧವಳಗಿರಿ!

*(ಭರತಸುತನು ಬೆಚ್ಚಿ ನಡುಗಿ ಚಿರುತ್ತಾನೆ.)*

ತಾಯೀ, ತಾಯೀ, ಇದೇನ್ ಭೂಮಿಕಂಪಂ!

ಶಿಕರಗಳ್ ತಲೆದಿಲೆಯುತಿವೆ!

ಪೆರ್ಮರಗಳುರುಳುತಿವೆ...... ನಿಲ್ಲಲಾರೆನ್!

**ಭಾರತಾಂಬೆ** – ಧೈರ್ಯಮಿರು ಕಂದಾ! ಪೇಳ್ ಮುಂಗಾಣ್ಬುದನ್!

**ಭರತಸುತ** – *(ಏದುತ್ತಾನೆ. ಇಲೆದೊಲೆದು ಸ್ಥಿರವಾಗುತ್ತಾನೆ.)*

ಅಮ್ಮಾ, ಅಮ್ಮಾ, ಅಮ್ಮಾ,

ಧವಳಗಿರಿ ತುಂಡಾಯ್ತು!

ಅಯ್ಯೊ ಉರುಳುತಿದೆ, ಉರುಳುತಿದೆ, ಉರುಳುತಿದೆ!

ಏನ್ ಭೀಮಂ, ಭಯಂಕರಂ, ರೌದ್ರದೃಶ್ಯಂ?

ಹಾ! ಹಾ! ಹಾ!

ಉರುಳಿತಾ ಮಹಾ ಸಾಗರಕೆ!……
ಅಯ್ಯೊ ಸಾಗರದ ನೀರೆಲ್ಲ ನೆಗೆದುದಂಗರಕೆ!
ಕಾರ್ಮೋಡಗಳ್ ಕವಿಯುತಿವೆ.
ಮಿಂಚುಗಳ್, ಗುಡುಗುಗಳ್, ಸಿಡಿಲುಗಳ್,
ಸುರಿಯುತಿದೆ ಪ್ರಲಯವರ್ಷಂ!
ತೊಳೆಯುತಿದೆ ರಕ್ತಕಲುಷಿತಮಾದ ಪೃಥ್ವಿಯಂ
ತನ್ನಮೃತವಾರಿಯಿಂ!…..

**ಭಾರತಾಂಬೆ** – ಬೆದರದಿರ್! ಮುಂದಪ್ಪುದಂ ಕಾಣ್…..

**ಭರತಸುತ** – ಮೋಡಗಳ್ ತೊಲಗುತಿವೆ! ಏನ್ ಬೆಳಕು!
ಹೊಂಬೆಳಗು ಚೆಲ್ಲುತಿದೆ ಬಾನ್ ದೇಶದಿಂ!….
ಹಕ್ಕಿಯಿಂಚರಮುಕ್ಕುತಿದೆ!….
ಪಚ್ಚೆ ಪಯಿರದೊ ಮುಚ್ಚಿ ಮುಸುಕತಿದೆ
ಧರಣಿದೇವಿಯ ಪೃಥಲ ವಕ್ಷಮಂ!
ದೂರದಿಂದಾವುದೋ ಕೇಳುತಿದೆ ದಿವ್ಯಗೀತಂ!
*(ಎಂದು ಸುಮ್ಮನಾಗಿ ಆಲಿಸುತ್ತಾನೆ.)*

**ಭಾರತಾಂಬೆ** – *(ನಗುಮೊಗದಿಂದ)*
ಮುಂದೆ?

**ಭರತಸುತ** – ಏನಿಂಪು! ಆಲಿಸಮ್ಮಾ!
*( 'ಜನಗಣಮನ '…. ಕೇಳಿ ಬರುತ್ತದೆ)*

**ಭಾರತಾಂಬೆ** – ಕಣ್ದೆರೆದು ಕಾಣ್. ರಾಷ್ಟ್ರಧ್ವಜಂಬಿಡಿದು
ಬರುತಿಹುದು ಮಂದಿ ಸಂದಣಿಸಿ ಗುಡಿಗೆ.
ನೀಂ ಕಂಡ ದರ್ಶನದೊಳ್ ಅಖಿಳಾರ್ಥಮಂ
ತಿಳಿದು ಕಾಣ್!
ಹೃದಯ ದೌರ್ಬಲ್ಯಮಂ ಮಾಣ್!
ಸ್ವಾತಂತ್ರ್ಯ ಜೀವನಂ ಬಲಿ ಪರಂಪರೆಯೆಂಬುದಂ,
ಬಲಿದಾನ ತತ್ತ್ವಮಂ, ಭಾವಿಸಿ ಮನಂಗಾಣ್!

*[ಭರತಮಾತೆ ಮೊದಲಿನಂತೆ ಕಾಳಿಕಾವಿಗ್ರಹದಲ್ಲಿ ವಿಲೀನೆಯಾಗುತ್ತಾಳೆ. ಭರತಸುತನು ಕಣ್ತೆರೆದು ನೋಡಿ ಅವಳಿಗೆ ಕೈಮುಗಿದು ದಂಡಪ್ರಣಾಮ ಮಾಡುತ್ತಾನೆ. 'ಜನಗಣಮನ ' ರಾಷ್ಟ್ರಗೀತೆಯ ಹಿನ್ನಲೆಯಲ್ಲಿ, ಮಹಾತ್ಮಗಾಂಧೀ ಕಿ ಜೈ! ವಂದೇಮಾತರಂ! ಮೊದಲಾದ ಘೋಷಣೆಗಳನ್ನು ಕೂಗುತ್ತ ಉತ್ಸಾಹದಿಂದ ಉನ್ಮತ್ತವಾದಂತೆ ಜನಪ್ರವಾಹ ಗುಡಿಯೊಳಗೆ ಬಂದು ಸಾಷ್ಟಾಂಗ ಪ್ರಣಾಮ ಮಾಡಿ ಎದ್ದುನಿಂತು ಕೈಮುಗಿದುಕೊಂಡು ದೇವೀ ಸ್ತೋತ್ರವನ್ನು ಹಾಡುತ್ತಿರುವ ಭರತಸುತನನ್ನು ಕಂಡು ನಿಶ್ಶಬ್ಧವಾಗುತ್ತದೆ. ಸುಮಧುರವೂ ಸ್ಫೂರ್ತಿದಾಯಕವೂ ಆಗಿ ದೇವೀಸ್ತುತಿ ಕೇಳಿಬರುತ್ತದೆ.]*

ಅಂಬಾ ಶಾಂಭವಿ ಚಂದ್ರಮೌಳಿರಬಲಾಽಪರ್ಣಾ ಉಮಾ ಪಾರ್ವತಿ ।
ಕಾಳೀ ಹೈಮವತೀ ಶಿವಾ ತ್ರಿನಯನೀ ಕಾತ್ಯಾಯನೀ ಭೈರವೀ ॥
ಸಾವಿತ್ರೀ ನವಯೌವನಾ ಶುಭಕರೀ ಸಾಮ್ರಾಜ್ಯಲಕ್ಷ್ಮೀಪ್ರದಾ ।
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ॥

ಅಂಬಾ ಮೋಹಿನಿ ದೇವತಾ ತ್ರಿಭುವನೀ ಆನಂದಸಂದಾಯಿನೀ ।
ವಾಣೀ ಪಲ್ಲವಪಾಣಿ ವೇಣುಮುರಳೀಗಾನಪ್ರಿಯಲೋಲಿನೀ ॥
ಕಲ್ಯಾಣೀ ಉಡುರಾಜಬಿಂಬವದನಾ ಧೂಮ್ರಾಕ್ಷ ಸಂಹಾರಿಣೀ ।
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ॥

ಅಂಬಾ ನೂಪುರ ರತ್ನ ಕಂಕಣಧರೀ ಕೇಯೂರ ಹಾರಾವಳೀ ।
ಜಾತೀ ಚಂಪಕ ವೈಜಯಂತಿಲಹರೀ ಗ್ರೈವೇಯ ವೈರಾಜತಾಮ್ ॥
ವೀಣಾ ವೇಣು ವಿನೋದ ಮಂಡಿತಕರಾ ವೀರಾಸನಾ ಸಂಸ್ಥಿತಾ ।
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ॥

ಅಂಬಾ ರೌದ್ರಿಣಿ ಭದ್ರಕಾಳಿ ಬಗಳಾ ಜ್ವಾಲಾಮುಖೀ ವೈಷ್ಣವೀ ।
ಬ್ರಹ್ಮಾಣೀ ತ್ರಿಪುರಾಂತಕೀ ಸುರನುತಾ ದೇದೀಪ್ಯಮಾನೋಜ್ವಲಾ ॥
ಚಾಮುಂಡಾ ಶ್ರಿತರಕ್ಷಪೋಷಜನನೀ ದಾಕ್ಷಾಯಣೀ ವಲ್ಲವೀ ।
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ॥

ಅಂಬಾ ಶೂಲಧನುಃಕುಶಾಂತಕುಶಧರೀ ಅರ್ಧೇಂದು ಬಿಂಬಾಧರೀ ।
ವಾರಾಹೀ ಮಧುಕೈಟಭಪ್ರಶಮನೀ ವಾಣೀರಮಾ ಸೇವಿತಾ ।
ಮಲ್ಲಾದ್ಯಾಸುರ ಮೂಕದೈತ್ಯದಮನೀ ಮಾಹೇಶ್ವರೀ ಅಂಬಿಕಾ ॥
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ॥

ಅಂಬಾ ಸೃಷ್ಟಿ ವಿನಾಶ ಪಾಲನಕರೀ ಆರ್ಯಾ ವಿಸಂಶೋಭಿತಾ |
ಗಾಯತ್ರೀ ಪ್ರಣವಾಕ್ಷರಾಮೃತರಸಃ ಪೂರ್ಣಾನುಸಂಧೀಕೃತಾ ||
ಓಂಕಾರೀ ವಿನುತಾ ಸುರಾರ್ಚಿತಪದಾ ಉದ್ದಂಡಾ ದೈತ್ಯಾಪಹಾರಿ |
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ||

ಅಂಬಾ ಶಾಶ್ವತ ಆಗಮಾದಿವಿನುತಾ ಆರ್ಯಾ ಮಹಾದೇವತಾ |
ಯಾ ಬ್ರಹ್ಮಾದಿ ಪಿಪೀಲಿಕಾಂತ ಜನನೀ ಯಾ ವೈ ಜಗನ್ಮೋಹಿನೀ ||
ಯಾ ಪಂಚ ಪ್ರಣವಾದಿ ರೇಫ ಜನನೀ ಯಾ ಚಿತ್ಕಳಾ ಮಾಲಿನೀ |
ಚಿದ್ರೂಪೀ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ ||

ಓಂ ಶಾಂತಿಃ ಶಾಂತಿಃ ಶಾಂತಿಃ

ಅಸ್ವತಂತ್ರೆ ಎಂಬುದನ್!

*[ಭರತಸುತನು ಬರುತ್ತಾನೆ. ಅವನ ಎಡದ ಕೈಲಿದ್ದ ಮಿಂಚುಂಪೊಂಜಿನ ಬೆಳಕಿನಿಂದ ದೇಗುಲ ಬೆಳಗುತ್ತದೆ. ಅವನ ತಲೆ ಕೆದರಿದೆ. ಕೈಕಾಲುಗಳಲ್ಲಿ ಕತ್ತರಿಸಿದ ಸಂಕೋಲೆಯ ತುಂಡುಗಳಿವೆ. ರಕ್ತದ ಕಲೆ ತುಂಬಿದ ಉಡುಗೆ ಹರಿದು ಹೋಗಿದೆ. ಮುಖದ ಗಾಯಗಳು ಭಯಾನಕವಾಗಿವೆ. ಬಲಗೈಯಲ್ಲಿ ಹಿಡಿದು ಹೆಗಲಮೇಲೆ ಆತುಕೊಂಡಿದ್ದ ಧ್ವಜಕಾಷ್ಠದ ತುದಿಯಲ್ಲಿ ಚರಕ ಚಿಹ್ನೆಯ ತ್ರಿವರ್ಣ ಧ್ವಜ ತೂಗುತ್ತಿದೆ. ದೊಡ್ಡದೊಂದು ಕೀಲಿಕೈ ರಕ್ತಮಯವಾಗಿ ವಕ್ಷದ ಮೇಲೆ ನೇತಾಡುತ್ತಿದೆ. 'ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು' ಎಂಬ ಚರಣ ಮುಗಿಯುತ್ತಿರುವಾಗ ಪ್ರವೇಶಿಸುತ್ತಾನೆ. ಹೊರಗೆ ದೂರದಲ್ಲಿ ವಾದ್ಯ ಸಂಭ್ರಮ ಮೊದಲಾಗುತ್ತದೆ.]*

**ಭರತಸುತ** – *(ಧ್ವಜವೆತ್ತಿ ಉತ್ತಾಲ ಧ್ವನಿಯಿಂದ)*
ಗೆಲ್, ತಾಯೆ, ಗೆಲ್!

**ಭಾರತಾಂಬೆ** – *(ಬಂಧಿತವಾದ ಕೈಗಳನ್ನು ಎತ್ತಲೆಳಸಿ ಗದ್ಗದದಿಂದ)*
ಬಾಳ್, ಮಗುವೆ, ಬಾಳ್.

**ಭರತಸುತ** – *(ಕೊರಳೆತ್ತಿ)* ಆಳ್! ಜಗವಾಳ್!
*(ಮಿಂಚುಂಪೊಂಜನ್ನು ಒಂದೆಡೆ ಇಟ್ಟು, ಧ್ವಜವನ್ನು ಒಂದು ಕಡಿ ನೆಟ್ಟು 'ವಂದೇ ಮಾತರಂ!' ಎಂದು ಆಘೋಷಿಸುತ್ತಾ ಸಾಷ್ಟಾಂಗ ಪ್ರಣಾಮಮಾಡಿ ಎದ್ದು ನಿಂತು ಗುಡಿ ಗುಡುಗುವಂತೆ ಆಘೋಷಿಸುತ್ತಾನೆ.)*

ಗೆಲ್, ತಾಯೆ, ಗೆಲ್!
ಬಾಳ್, ತಾಯೆ, ಬಾಳ್!
ಆಳ್, ಜಗವನಾಳ್!

**ಭಾರತಾಂಬೆ** – *(ಹರ್ಷಾಧಿಕ್ಯದಿಂದ ಸಗದ್ಗದೆಯಾಗಿ)*
ಬಂದೆಯಾ, ಮಗು.

**ಭರತಸುತ** – *(ಉಲ್ಲಸಿತನಾಗಿ)*
ಬಂದೆನ್! ತಂದೆನ್! ಇದೆಕೊ ಕಾಣ್!
*(ವಕ್ಷದ ಮೇಲೆ ನೇಲುತ್ತಿದ್ದ ಕೀಲಿಕೈಯನ್ನು ನಿರ್ದೇಶಿಸುತ್ತಾನೆ)*

**ಭಾರತಾಂಬೆ** – ವತ್ಸ, ಇದೇನ್ ಕೆನ್ನೀರ್!

**ಭರತಸುತ** – ನೆತ್ತರೊಳ್ ಮುಳುಗಿರ್ದುದನ್ ಎತ್ತಿ ತಂದೆನ್, ತಾಯಿ.

**ಭಾರತಾಂಬೆ** – ಪರಕೀಯ ವೈರಿಗಳ್ ಚೆಲ್ಲಿದುದೆ?

**ಭರತಸುತ** – ಅಲ್ತಲ್ತು, – ನಮ್ಮವರ್ ಚೆಲ್ಲಿದುದೆ!
ಪರಕೀಯ ವೈರಿಗಳ್ ಚೆಲ್ಲಿದಾ ಶೋಣಿತಮ್
ಹಸುಗೊರಸು ನೀರ್, ನಮ್ಮವರ್ ಚೆಲ್ಲಿದಾ
ಕಡಲದಿರ್! ಈ ನಿನ್ನ ಶೃಂಖಲೆಯಗಳಂ ಬಿಗಿದ
ಬೀಗಮಂ ತೆಗೆವ ಕೀಲಿಕೈ ಮುಳುಗಿರ್ದುದಾ
ಸೋದರ್ ಸೋದರರ ಮೈಯಿಂದೆ ಚೆಲ್ಲಿದಾ
ಮತವೈರ ಸಂಜಾತ ರುಧಿರ ಪ್ರವಾಹದೊಳ್!

**ಭಾರತಾಂಬೆ** – ಅಯ್ಯೊ ಇಲ್ಲಿಯಂ, ಬಿಡುಗಡೆಯ ಪಡೆವಲ್ಲಿಯುಂ,
ನಾನೆಂತಪ್ಪ ದುರ್ಭಾಗ್ಯೆಯೆನ್!
ಅನ್ಯರಿಂ ಪಡೆವಡೆಯೊಳಂದು ಬಲಿದಾನಂ!
ನನ್ನವರೆ ಕೊಡುವೆಡೆಯೊಳಿಂದು ಬಲಿದಾನಂ!
ಇನ್ನುಮೆನಿಕಿರ್ಕುಮೋ ಮುನ್ ಬಲಿಯ ದಾನಂ!

**ಭರತಸುತ** – ಅಳಲದಿರ್, ತಾಯೆ, ಅಳಲ್ಕಿದು ಪೊಳ್ತಳು.
ನಿನ್ನಂ ಮೊದಲ್ ಸ್ವತಂತ್ರೆಯಂ ಮಾಳ್ಪೆನ್.
ಅನಂತಂ ನೋಳ್ಪಮೀ ನಿನ್ನ ಸ್ವಾತಂತ್ರ್ಯದಿಂ
ಸಂಭವಿಪ ಸದ್ಬುದ್ಧಿಯಂ ಸಂತೃಪ್ತಿಯಂ, ಶಾಂತಿಯಂ!

*[ದೂರದಿಂದ 'ವಂದೇ ಮಾತರಂ' ಗೀತೆ ಕೇಳುತ್ತಿರಲು ಕೀಲಿಕೈಯಿಂದ ಬೀಗವನ್ನು ಕಳಚುತ್ತಾನೆ. ಸರಪಣಿಗಳ ಖಣಿ ಖಣಿಲ್ ಕಳಚಿ ಬೀಲುತ್ತವೆ. ಹೂಮಳೆ ಸುರಿಯುತ್ತದೆ. ಮಂಗಳವಾದ್ಯ ಮೊಳಗುತ್ತವೆ. ಭರತಸುತನು ಸ್ವಾತಂತ್ರ್ಯೆಯಾದ ಭರತಮಾತೆಯನ್ನು ಕಣ್ಣರಳಿಸಿ ನೋಡುತ್ತ ಬಹು ಕಂಠಂಗಳಿಗೆ ತನ್ನ ಕಂಠವನ್ನೂ ಸೇರಿಸಿ ಹಾಡುತ್ತಾನೆ.]*

**ಸರ್ವಗೀತೆ**

ಲೋಕ ಮಲಗಿದಂದು ನೀ ನಟ್ಟನಡೂ ರಾತ್ರಿ
ಎಚ್ಚರಾಂತೆ, ಅವಿಶ್ರಾಂತೆ; ಆದೆ ಪುನರ್ಯಾತ್ರಿ.
ಸರ್ವಕಾಲ ಸರ್ವದೇಶ ಸರ್ವಮೋಕ್ಷ ಮಂತ್ರೇ,
ಅಸ್ವತಂತ್ರತ್ರೆ ಸುಸ್ವತಂತ್ರೆಯಾದ ವಿಶ್ವತಂತ್ರೇ.
ಏಳು ತಾಯಿ, ಬಾಳು ತಾಯಿ, ಜಗತ್ ಕಃಲ್ಯಾಣಿ;
ಯುಗಯುಗಾಯು ಜಗವನಾಳು, ಧರ್ಮಚಕ್ರಪಾಣಿ;
ದಿಗ್‌ದಿಗಂತ ರಣಿತಮಕ್ಕೆ ನಿನ್ನ ದಿವ್ಯವಾಣಿ.
ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ, ರಾಣಿ!
ಶಾಂತಿ ಸತ್ಯ ಮುಕ್ತಿ ಧರ್ಮ ತತ್ತ್ವ ಮಹೋದಾತ್ತೆ,
ಕಾವ್ಯ ಶಿಲ್ಪ ನೃತ್ಯ ಗಾನ ಸಕಲ ಕಲಾವೇತ್ತೆ,
ಶ್ರದ್ಧೆಯಾಗಿ ಬುದ್ಧಿಯಾಗಿ ತಪಸ್ ಶಕ್ತಿಯಾಗಿ
ನಡಸು ನಮ್ಮನೆಲ್ಲ, ಅಮ್ಮ, ಪೂರ್ಣಸಿದ್ಧಿಗಾಗಿ!
ನಮೋ ದೇವಿ! ನಮೋ ತಾಯಿ! ನಮೋ ಭರತಮಾತೆ!
ನಮಸ್ ಸತ್ಯೆ! ನಮೋ ನತ್ಯೆ! ನಮೋ ಜಗನ್ಮಾತೆ!